
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/-
ಕನ್ನಡ-ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAPU PRAPANCHA

ಸಂಪುಟ-05 • ಸಂಚಿಕೆ-01 • ಜೂನ್ 2023



ಭಾರತ ಸಂವಿಧಾನ

ಪ್ರಸ್ತಾವನೆ

ಭಾರತದ ಜನತೆಯಾದ ನಾವು ಭಾರತವನ್ನು
ಸಾರ್ವಭೌಮ ಸಮಾಜವಾದಿ
ಮತಧರ್ಮ ನಿರಪೇಕ್ಷ ಜನತಂತ್ರಾತ್ಮಕ
ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ
ಭಾರತದ ಎಲ್ಲ ನಾಗರಿಕರಿಗೆ
ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯ
ಸ್ಥಾನಮಾನ, ಅವಕಾಶಗಳ ಸಮತೆ
ದೊರೆಯುವಂತೆ ಮಾಡುವ,
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ
ಎಲ್ಲರಲ್ಲಿ ಭ್ರಾತೃತ್ವ ಭಾವನೆ ಮೂಡಿಸುವ
ದೃಢ ಸಂಕಲ್ಪ ಮಾಡಿ
ನಮ್ಮ ಸಂವಿಧಾನ ಸಭೆಯಲ್ಲಿ
1949ರ ನವೆಂಬರ್ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ
ಅರ್ಪಿಸಿಕೊಂಡು ಅಂಗೀಕರಿಸಿ, ಶಾಸನವಾಗಿ
ವಿಧಿಸಿಕೊಂಡಿದ್ದೇವೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ–ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
CreativeGeekZ
Yadhava College Road,
Madhavanagara, Bengaluru - 560001
Ph : +91 80 40927049
E-mail : mail@creativegeekz.com

Design : **Ujwal Creations**, Bangalore

ರೂ. 28/– **BAPU PRAPANCHA**

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ ಸಂಪುಟ–05 • ಸಂಚಿಕೆ–01 • ಜೂನ್ 2023

ಹಿಂದಿನ ರಕ್ಷಾಪುಟ : ಎಂ ಎಸ್ ಮೂರ್ತಿ

ಪತ್ರಗಳು



ಬಾಪು ಪ್ರಪಂಚ ಮಾಸಿಕದ ಹಿಂಬದಿ ರಕ್ಷಾಪುಟದಲ್ಲಿ ಬಳಸುತ್ತಿರುವ ಖ್ಯಾತ ಚಿತ್ರ ಕಲಾವಿದರಾದ ಎಂ ಎಸ್ ಮೂರ್ತಿಯವರ ರೇಖಾ ಚಿತ್ರಗಳನ್ನು ನೋಡುವುದೊಂದು ಸೊಗಸು. ಅವರು ಗಾಂಧೀಜಿಯವರ ಬಗ್ಗೆ ಅಪಾರ ಪ್ರೀತಿ ಗೌರವಗಳಿಂದ ಬಿಡಿಸಿರುವ ಈ ಚಿತ್ರಗಳು ಬಾಪು ಪ್ರಪಂಚ ಪತ್ರಿಕೆಗೆ ಒಂದು ಮೆರುಗು .

ಧನರಾಜ್, ವಿನ್ಯಾಸಕಾರರು, ಬೆಂಗಳೂರು

* * *


ಡಾ. ನೆಲ್ಲು ಕುಂಟೆ ವೆಂಕಟೇಶ್ ಅವರ "ಬುದ್ಧ : ಮೊಗೆದಷ್ಟೂ ಕಲಿಯುಗದ ಕಡಲು "ಲೇಖನ ಬುದ್ಧ ಜಯಂತಿ ಸಮಯಕ್ಕೆ ಸಕಾಲಿಕವಾಗಿದೆ. ಲೇಖನದ ಸಾಹಿತ್ಯಕ ಭಾಷೆ ಲೇಖನಕ್ಕೆ ಗಂಭೀರತೆಯನ್ನು ತಂದು ಕೊಟ್ಟಿದೆ. ಬೇಂದ್ರೆಯವರು ಬರೆದಿರುವ " ಬುದ್ಧ" ಕವನ ಬಹಳ ಜನಪ್ರಿಯವಾಗಿದ್ದು 'ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ ' ಸಾಲು ಬಹಳ ಅರ್ಥಗರ್ಭಿತವಾಗಿದೆ.

ಲತಾ ರಾಣಿ , ಮೈಸೂರು

* * *

ಇತ್ತೀಚಿಗೆ ನಿಧನರಾದ ಮಹಾತ್ಮ ಗಾಂಧೀಜಿಯವರ ಮೊಮ್ಮಗ ಅರುಣ್ ಮಣಿಲಾಲ್ ಗಾಂಧಿಯವರ ಬಗ್ಗೆ ಅವರ ಪುತ್ರ ತುಷಾರ್ ಗಾಂಧಿ ಬರೆದಿರುವ ಇಂಗ್ಲಿಷ್ ಲೇಖನ " my nomad father " ಅರುಣ್ ಲಾಲ್ ಅವರ ಅಲೆಮಾರಿ ಜೀವನ ಪ್ರವೃತ್ತಿಯನ್ನು ತೆರೆದಿಟ್ಟಿದೆ. ದಕ್ಷಿಣ ಆಫ್ರಿಕಾದ ಫೀನಿಕ್ಸ್ ಆಶ್ರಮದಲ್ಲಿ ಹುಟ್ಟಿದ ಅರುಣ್ ಲಾಲ್ ಕೊಲ್ಲಾಪುರದಲ್ಲಿ ಅವರೇ ಸ್ಥಾಪಿಸಿದ್ದ ಆಶ್ರಮದಲ್ಲಿ ನಿಧನರಾದದ್ದು ಕುತೂಹಲದ ಸಂಗತಿ.

ಡಾ. ಅಬಿದಾ ಬೇಗಂ, ಬೆಂಗಳೂರು



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತ ಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಮುದ್ರಿತ ಸಂಚಿಕೆಯ ಜೊತೆಗೆ ಈ ಸಂಚಿಕೆಗಳನ್ನು ಡಿಜಿಟಲ್ ರೂಪದಲ್ಲಿ ಸಹ ಪ್ರಸಾರ ಮಾಡಲಾಗುತ್ತಿದೆ. ಆಸಕ್ತರು ಈ ಸಂಚಿಕೆಗಳನ್ನು ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು gandhi.sanchaya.net ಜಾಲತಾಣದಲ್ಲಿ ವೀಕ್ಷಿಸಿ.

ಪತ್ರಿಕೆಗೆ ಚಂದಾದಾರರಾಗಲು ಆಸಕ್ತಿ ಇರುವವರು ವಾರ್ಷಿಕ 250 ರೂಗಳನ್ನು ಪಾವತಿಸಿ ವಿಳಾಸ ಕಳುಹಿಸಿದರೆ ಅವರಿಗೆ ಅಂಚೆ ಮೂಲಕ ಪತ್ರಿಕೆಯನ್ನು ಕಳುಹಿಸಲಾಗುವುದು.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
ಗೌರವ ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಭವನ, ಬೆಂಗಳೂರು –560001
080 22261967 / 9738605799 । gandhibhavanabengaluru@gmail.com

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.



ಕರ್ನಾಟಕದ ಕಸ್ತೂರ್ ಬಾ

ಯಶೋಧರಮ್ಮ

–ಲೀಲಾ ವಾಸುದೇವ್

ಶ್ರೀಮತಿ ಯಶೋಧರಮ್ಮ ಅವರು ಒಕ್ಕಲಿಗ ಜನಾಂಗದ ಅಭಿವೃದ್ಧಿ ಪುರುಷರೆಂದೇ ಜನಾನುರಾಗಿಯಾಗಿದ್ದ ಕೆ. ಎಚ್. ರಾಮಯ್ಯ ಹಾಗೂ ರೇವಮ್ಮ ಅವರ ಹಿರಿಯ ಪುತ್ರಿ . ಇವರು 1905 ಮೇ 28 ರಂದು ಜನಿಸಿದರು. ಇವರಿಗೆ ನಾಲ್ಕು ಜನ ತಂಗಿಯರು ಹಾಗೂ ಆರು ಜನ ತಮ್ಮಂದಿರು. ವಿದ್ಯಾವಂತ ಹಾಗೂ ಸಕಲ ಸಂಪತ್ತನ್ನು ಹೊಂದಿದ್ದ ಕುಟುಂಬ.

ಕೆ. ಎಚ್. ರಾಮಯ್ಯ ಅವರು ತಮ್ಮ ಹಿರಿಯ ಮಗಳಾದ ಯಶೋಧರ ತಮ್ಮಂತೆ ಎಲ್ಲವನ್ನೂ ತ್ಯಾಗಮಾಡಿ ಜನಸೇವೆ ಮಾಡಬೇಕೆಂಬ ಕನಸು ಕಂಡವರು. ಆದ್ದರಿಂದ ಬುದ್ಧನ ಪತ್ನಿಯ ನೆನಪಿಗಾಗಿ "ಯಶೋಧರ' ಎಂದು ಹೆಸರನ್ನು ಮಗಳಿಗೆ ನಾಮಕರಣ ಮಾಡಿದ್ದರು. ಮಗಳು ಬೆಳೆದಂತೆ ಅವಳ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಯಿತು. ಹಿಂದುಳಿದ ಜನಾಂಗದಲ್ಲಿ ಗಂಡು ಮಕ್ಕಳನ್ನೇ ವಿದ್ಯೆ ಕಲಿಯಲು ಕಳುಹಿಸದಿದ್ದ ಕಾಲದಲ್ಲಿ ತಂದೆ ತಾಯಿಗಳು ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಅಂತಹ ಹೆಚ್ಚು ತಿಳುವಳಿಕೆ ಇಲ್ಲದ ಕಾಲದಲ್ಲಿ ಸಮಾಜ ಸುಧಾರಕರಾದ ಶ್ರೀ ರಾಮಯ್ಯನವರು ಯಶೋಧರಳನ್ನು ಪ್ರಾಥಮಿಕ ವಿದ್ಯಾಭ್ಯಾಸದ ಅನಂತರ ಲಂಡನ್ ಮಿಷನ್ ಪ್ರೌಢಶಾಲೆಗೆ ಸೇರಿಸಿದರು. ಸಾಂಪ್ರದಾಯಿಕ ಕುಟುಂಬದವರಾದ ತಾಯಿ ಶ್ರೀಮತಿ ರೇವಮ್ಮನವರಿಗೆ ಇದು ಸಮಾಧಾನವಿರಲಿಲ್ಲ.

ಮಗಳಿಗೆ ಸ್ವಲ್ಪ ವಿದ್ಯೆ ಇರಬೇಕು. ಆದರೆ, ಮನೆ ಕೆಲಸವನ್ನು ಮತ್ತು ಕೈಕೆಲಸಗಳನ್ನು ಕಲಿತು ಮಗಳು ಒಳ್ಳೆಯ ಗೃಹಿಣಿಯಾಗಬೇಕೆಂಬುದು ತಾಯಿಯ ಅಭಿಪ್ರಾಯ, ಆಸೆ. ಮನೆಯಲ್ಲಿ ಅತಿಥಿ ಅಭ್ಯಾಗತರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಇದರಿಂದ ಮಗಳ ವಿದ್ಯಾಭ್ಯಾಸಕ್ಕೆ ಅಡಚಣೆಯಾಗುತ್ತಿದೆ ಎಂದು ತಿಳಿದ ರಾಮಯ್ಯ ಅವರು ಆಕೆಯನ್ನು ಹಾಸ್ಟಲಿಗೆ ಸೇರಿಸಿದರು. ಪ್ರೌಢಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ (ಎಸ್.ಎಸ್.ಎಲ್.ಸಿ. ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಯಶೋಧರಳನ್ನು ಮದರಾಸಿನ ಕ್ವೀನ್ ಮೇರೀಸ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದಲು ಅನುವು



ಯಶೋದರಮ್ಮನವರ ಲಗ್ನ ಪತ್ರಿಕೆ



ಯಶೋಧರಮ್ಮ ಪತಿ ಎಚ್ ಸಿ ದಾಸಪ್ಪನವರ ಜೊತೆಯಲ್ಲಿ

ಮಾಡಿಕೊಟ್ಟರು. ರಾಮಯ್ಯ ಅವರ ನಿರ್ಧಾರದ ಮುಂದೆ ತಾಯಿ ರೇವಮ್ಮ ಅವರ ಮಾತು ನಡೆಯುವಂತಿರಲಿಲ್ಲ. ಆದರೆ ಅಲ್ಲಿನ ಹವಾಮಾನ ಒಗ್ಗದೆ ಹೋದುದರಿಂದ ವಿದ್ಯಾಭ್ಯಾಸವನ್ನು ಇಂಟರ್ಮೀಡಿಯೇಟ್ನಿಂದ ಮುಂದುವರಿಸಲು ಸಾಧ್ಯವಾಗಲಿಲ್ಲ.

ಯಶೋಧರಮ್ಮ ಅವರು ಹಾಸ್ಟಲಿನಿಂದ ರಜಾ ದಿನಗಳಿಗೆ ಮನೆಗೆ ಬಂದಾಗ ತಮ್ಮಂದಿರು, ತಂಗಿಯರು ಅವರನ್ನು ಸುತ್ತಿಕೊಳ್ಳುತ್ತಿದ್ದರು. ತಮ್ಮ ಅನುಭವಗಳನ್ನು ಅವರೊಡನೆ ಹಂಚಿಕೊಳ್ಳುತ್ತಿದ್ದರು. "ಅವರಿಗೆ ಸಂದ ಬಹುಮಾನಗಳನ್ನು ಕಂಡು ತಮ್ಮಂದಿರು ತಂಗಿಯರು ಬಹು ಸಂತೋಷ ಪಡುತ್ತಿದ್ದರು.

ಕೆ.ಎಚ್. ರಾಮಯ್ಯ ಅವರು ಹಿಂದುಳಿದ ಜನಾಂಗದವರ ಶ್ರೇಯಸ್ಸಿಗಾಗಿ ದುಡಿಯುತ್ತಿದ್ದಂತೆ ಕೊಡಗಿನ ನ್ಯಾಯಾಧೀಶರಾಗಿದ್ದ ರಾವ್ ಸಾಹೇಬ ಚನ್ನಯ್ಯ ಅವರು ಸಹ ಹಿಂದುಳಿದ ವರ್ಗಕ್ಕೆ ವಿದ್ಯೆ, ನೌಕರಿ, ಸಮಾನತೆಗಳಿಗಾಗಿ ಹೋರಾಡುತ್ತಿದ್ದರು. ಬ್ರಿಟೀಷ್ ಸರ್ಕಾರವು ಚನ್ನಯ್ಯನವರಿಗೆ "ರಾವ್ ಬಹದ್ದೂರ್" ಎಂಬ ಬಿರುದನ್ನು ನೀಡಿ ಗೌರವಿಸಿತ್ತು. ಇಂತಹ ನಿಷ್ಠಾವಂತ ಶ್ರಮಜೀವಿ, ಪ್ರಗತಿ ಪರ ಹೋರಾಟಗಾರ, ಬಡವರ ಬಂಧು. ಇವರ ಸೇವೆಗೆ ಒಲಿದ ಮಹಾರಾಜರು ಚನ್ನಯ್ಯ ಅವರಿಗೆ "ಲೋಕ ಸೇವಾನಿರತ' ಎಂಬ ಬಿರುದನ್ನು ನೀಡಿದ್ದರು.

ಕೆ ಹೆಚ್ ರಾಮಯ್ಯನವರು ತಮ್ಮ ಮಗಳು ಯಶೋದರಮ್ಮನವರಿಗೆ ಚನ್ನಯ್ಯನವರ ಪುತ್ರ ವಕೀಲ ಎಚ್ ಸಿ ದಾಸಪ್ಪನವರ ಜೊತೆ ವಿವಾಹ ಮಾಡಲು ಬಯಸಿದರು. ಚನ್ನಯ್ಯನವರ ಕುಟುಂಬಕ್ಕೂ ಈ ಸಂಬಂಧ ಇಷ್ಟವಾಗಿ ಅವರಿಬ್ಬರ ವಿವಾಹ ನಡೆಯಿತು.

ಗಾಂಧೀಜಿ ಅವರ ಪ್ರಭಾವ ರಾವ್ ಬಹಾದ್ದೂರ್ ಚನ್ನಯ್ಯನವರ ಪುತ್ರ ಎಚ್. ಸಿ ದಾಸಪ್ಪ ಅವರು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಪದವಿಯ ನಂತರ ಬೊಂಬಾಯಿಯಲ್ಲಿ ಎಲ್.ಎಲ್. ಬಿ ಪದವಿ ಪಡೆದು ಮೈಸೂರಿಗೆ ಬಂದು ವಕೀಲ ವೃತ್ತಿಯನ್ನು ಆರಂಭಿಸಿ ಅಲ್ಪ ಅವಧಿಯಲ್ಲೇ ಹೆಸರಾಂತ ವಕೀಲರಾದರು. ಹೀಗಿದ್ದೂ ಗಾಂಧೀಜಿ ಅವರ ಆಹ್ವಾನಕ್ಕೆ ಮಣಿದು ಯಶೋಧರಮ್ಮ ಮತ್ತು ದಾಸಪ್ಪ ಅವರು ತಮ್ಮ ಎರಡು ಗಂಡು ಮಕ್ಕಳು ರಾಮದಾಸ್ ಮತ್ತು ತುಳಸೀದಾಸ್ ಸಮೇತ ವಾರ್ಧಾದಲ್ಲಿನ ಸೇವಾಗ್ರಾಮಕ್ಕೆ ತೆರಳಿದರು. ಆರು ತಿಂಗಳೂ ಅಲ್ಲಿಯೇ ತಂಗಿ ಆಶ್ರಮದ ಕಟ್ಟುನಿಟ್ಟಿನ ನಿಯಮಗಳಿಗೆ ಹೊಂದಿಕೊಂಡು ನಡೆದರು. ಕುಟುಂಬ ಸಮೇತ ಬಂದ ದಾಸಪ್ಪ

ಅವರನ್ನು ಮತ್ತು ಯಶೋದರ ಅವರನ್ನು ನೋಡಿ ಗಾಂಧೀಜಿ ಅವರಿಗೆ ಅನಂತ ಆನಂದ ಉಂಟಾಯಿತು.

ಮಹಾತ್ಮ ಗಾಂಧೀಜಿ ಅವರ ಪ್ರಭಾವಕ್ಕೆ ಮಾರು ಹೋದ ದಾಸಪ್ಪ ದಂಪತಿಗಳು ವಾರ್ಧಾದ ಸೇವಾಗ್ರಾಮದಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡು ಸೇವಾ ನಿರತರಾಗಿದ್ದರು. ಹಿಂತಿರುಗಿದ ಮೇಲೆ ಅವರ ಜೀವನ ಶೈಲಿಯು ಸಂಪೂರ್ಣವಾಗಿ ಬದಲಾಯಿತು. ಗಾಂಧೀಜಿ ಅವರ ಪ್ರಭಾವದಿಂದ ದಾಸಪ್ಪ ಅವರು ತಮ್ಮ ವೃತ್ತಿಗೆ ವಿದಾಯ ಹೇಳಿ ದೇಶಸೇವೆಗೆ ಸಜ್ಜಾದರು. ತಮ್ಮ ಎಲ್ಲ ರೇಷ್ಮೆ ವಸ್ತ್ರ ಒಡವೆಗಳನ್ನು ತ್ಯಜಿಸಿ, ದಂಪತಿಗಳಿಬ್ಬರೂ ಖಾದಿ ವಸ್ತ್ರಧಾರಿಗಳಾದರು. ಸ್ವತ: ಚರಕದಿಂದ ನೂಲನ್ನು ತೆಗೆಯಲು ಪ್ರಾರಂಭ ಮಾಡಿದರು. ಮೈಸೂರಿನ ಯಶೋಧರಮ್ಮ ಅವರ ಮನೆ "ಯಶೋವಿಲಾಸ' ಗ್ರಾಮೀಣ ಭಾಗದಿಂದ ಬರುತ್ತಿದ್ದ ಬಡ ವಿದ್ಯಾರ್ಥಿನಿಯರಿಗೆ ಆಶ್ರಯವಾಗಿದ್ದಿತು. ದಾಸಪ್ಪ ಅವರು ತಮ್ಮ ಮನೆ ಮತ್ತು ವಕೀಲ ವೃತ್ತಿಯ ಕಛೇರಿಯನ್ನೇ ಕಾಂಗ್ರೆಸ್ ಕಛೇರಿಯನ್ನಾಗಿ ಮಾಡಿಕೊಂಡರು. ದಾಸಪ್ಪ ಅವರ ಬಿರು ಭಾಷಣದ ಪ್ರಯುಕ್ತ ಆಗಾಗ್ಗೆ ಜೈಲು ವಾಸವನ್ನು ಅನುಭವಿಸಬೇಕಾಗುತ್ತಿತ್ತು. ದಾಸಪ್ಪ ದಂಪತಿಗಳ ಜೀವನದ ಬದಲಾವಣೆಯನ್ನು ಕಂಡ ತಾಯಿ ರೇವಮ್ಮ ಅವರು ತುಂಬ ದುಃಖ ಪಡುತ್ತಿದ್ದರು.

ರಾಜಕೀಯ ರಂಗ

ಯಶೋಧರಮ್ಮ ಮೈಸೂರು ಪುರಸಭೆಯ ಚುನಾವಣೆಯಲ್ಲಿ ಪ್ರಚಂಡ ಬಹುಮತಗಳಿಸಿ ಗೆದ್ದ ಪ್ರಥಮ ಮಹಿಳೆ ಆಗಿದ್ದರು. ಹೆಚ್.ಸಿ. ದಾಸಪ್ಪ ಅವರ ದಸ್ತಗಿರಿಯಾದ ಕಾರಣ ಮೈಸೂರು ನ್ಯಾಯವಿಧಾಯಕ ಸಭೆಗೆ ಪ್ರಪ್ರಥಮ ಮಹಿಳಾ ಉಮೇದುವಾರರಾಗಿ ನಿಂತು ಜಯಗಳಿಸಿದರು. ಪ್ರಾರಂಭದಿಂದಲೂ ಮಹಿಳಾ ಪ್ರತಿನಿಧಿಗಳೇ ಇಲ್ಲದ ಸಭೆಗೆ ಮೊದಲ ಭಾರಿಗೆ ಚುನಾಯಿತರಾದ ಕೀರ್ತಿ ಇವರದು. ಮೈಸೂರು ಸಂಸ್ಥಾನದ ಕಾಂಗ್ರೆಸ್‌ನ ಪ್ರಪ್ರಥಮ ಮಹಿಳಾ ಅಧ್ಯಕ್ಷರಾದರು.

ವಾರ್ತಾ ಪತ್ರಿಕೆಗಳ ಮೇಲೆ ಜಾರಿಗೆ ತಂದ ಮಸೂದೆಯನ್ನು ನ್ಯಾಯವಿಧೇಯಕ ಸಭೆಯಲ್ಲಿ ವಿರೋಧಿಸಿ ಮಾತನಾಡಿದರು. ಈ ವಿಷಯಗಳನ್ನು ಸಭೆಯ ಮುಂದೆ ತಂದು ತಮ್ಮ ವಿಷಾದವನ್ನು ವ್ಯಕ್ತ ಪಡಿಸಿದರು. ಮಸೂದೆಯನ್ನು ಪತ್ರಕರ್ತರ ಮೇಲೆ ಹೇರಬಾರದೆಂದು ಮತ್ತು ಪತ್ರಿಕೆಗಳ ಸಕಾರಾತ್ಮಕ ವಿಚಾರಗಳನ್ನು ಎತ್ತಿ ಹಿಡಿದರು. ಎರಡನೆಯದಾಗಿ ಜನರಲ್ಲಿರುವ ಮೂಢನಂಬಿಕೆಗಳನ್ನು ಕಡಿಮೆ ಮಾಡಿ ಅವರ ಮನಸ್ಸಿನಲ್ಲಿ ಜಾಗೃತಿಯನ್ನು ಮೂಡಿಸಲು ವಿದ್ಯಾಭ್ಯಾಸ ಚಿಅತ್ಯಗತ್ಯ ಎಂದು ತಿಳಿಸಿದರು. ತಂದೆಯಂತೆ ಮಗಳೂ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆಧ್ಯತೆಯನ್ನಿತ್ತು ಸಮಾಜದ ಉದ್ಧಾರವಾಗಬೇಕೆಂದು ಶ್ರಮಿಸಿದರು. ಸರ್ಕಾರವು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕು. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಹೆಚ್ಚು ಸೌಕರ್ಯಗಳನ್ನು ನೀಡುವುದು ಎಲ್ಲರ ಕರ್ತವ್ಯವೆಂದು ಅಭಿಪ್ರಾಯ ಪಟ್ಟರು.

ಮೈಸೂರು ಕಾಂಗ್ರೆಸ್ ಭಾರತದ ಸ್ವಾತಂತ್ರಕ್ಕಾಗಿ ಹೋರಾಟ ನಡೆಸಿದ ಅನೇಕ ಮಹಾಪುರುಷರು ತಮ್ಮ ಜೀವನವನ್ನೇ ಮುಡುಪಿಟ್ಟು ಭಾಗಿಯಾಗಿದ್ದರು. ಇದರಲ್ಲಿ ಮಹಿಳೆಯರ ಪಾತ್ರವು ಮಹತ್ತರವಾದದ್ದು. ಅದರಲ್ಲೂ ಮೈಸೂರು ಸಂಸ್ಥಾನದಲ್ಲಿನ ಅನೇಕ ಮಹಿಳೆಯರು ಸುಬ್ಬಮ್ಮ ಜೋಯಿಸ್, ಬಳ್ಳಾರಿ ಸಿದ್ದಮ್ಮ,



ತಾಯಮ್ಮವೀರಣ್ಣಗೌಡ ಮುಂತಾದ ಮಹಿಳೆಯರು ಗಾಂಧೀಜಿ ಅವರ ಕರೆಗೆ ಮಣಿದು ಸಂಗ್ರಾಮದಲ್ಲಿ ಧುಮುಕಿದ್ದರು. ಇಂತಹ ಮಹಿಳೆಯರಲ್ಲಿ ಅಗ್ರ ಗಣ್ಯರಾಗಿ ಯಶೋಧರಮ್ಮ ದಾಸಪ್ಪ ಅವರು ಹೊರಹೊಮ್ಮಿದ್ದರು. ಪತಿ ದಾಸಪ್ಪ ಅವರ ಸಹಕಾರ ಮತ್ತು ಗಾಂಧೀಜಿ ಅವರ ಪ್ರಭಾವದಿಂದ ಉತ್ತಮ ವಾಗ್ಮಿಯಾಗಿದ್ದ ಯಶೋಧರಮ್ಮ ಅವರು ತಮ್ಮ ಭಾಷಣದ ಮೂಲಕ ಮಹಿಳೆಯರನ್ನು ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತಿದ್ದರು . ಶ್ರೀಮಂತಿಕೆಯ ಆಡಂಬರವಿಲ್ಲದೆ,



ಯಶೋಧರಮ್ಮ ದಾಸಪ್ಪ ಅವರು ಕುಟುಂಬದವರೊಂದಿಗೆ
ನಿಂತಿರುವವರಲ್ಲಿ (ಎಡದಿಂದ) ತುಳಸೀದಾಸಪ್ಪ, ಹೆಚ್.ಸಿ. ದಾಸಪ್ಪ, ರಾಮದಾಸ್,
ಕುರ್ಚಿಯಲ್ಲಿ ಕುಳಿತಿರುವವರಲ್ಲಿ (ಎಡದಿಂದ) ಸರೋಜಮ್ಮ, ಯಶೋದರಮ್ಮ ದಾಸಪ್ಪ
ಮತ್ತು ಗಿರಿಜಮ್ಮ, ಪ್ರಭ ಮತ್ತು ಮೊಮ್ಮಕ್ಕಳು

ಅಧಿಕಾರದ ಆಸೆಗಳಿಲ್ಲದೆ, ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದ ದಾಸಪ್ಪ ದಂಪತಿಗಳಿಗೆ ಜನ ಸ್ಪಂದಿಸುತ್ತಿದ್ದರು ಹಾಗೂ ಅವರ ಮಾತಿಗೆ ಮನ್ನಣೆಯನ್ನು ನೀಡುತ್ತಿದ್ದರು.

ಮೈಸೂರು ಪ್ರದೇಶ ಕಾಂಗ್ರೆಸ್ಗೆ ಸ್ವಂತ ಕಟ್ಟಡವಿಲ್ಲದ ಕಾಲದಲ್ಲಿ ಯಶೋಧರಮ್ಮ ಅವರು ತಮ್ಮ ಆಸ್ತಿಯನ್ನೇ ಬರೆದು ಕೊಟ್ಟು ಕಟ್ಟಡ ನಿರ್ಮಾಣ ಮಾಡಿಕೊಟ್ಟರು . ತಮ್ಮ ಪಾಲಿಗೆ ಬಂದ ಅಧಿಕಾರದ ಎಲ್ಲಾ ಜವಾಬ್ದಾರಿಯನ್ನು ಯಶೋಧರಮ್ಮನವರು ಕಳಂಕವಿಲ್ಲದೆ ನಿಷ್ಠೆಯಿಂದ ನಡೆಸಿಕೊಂಡು ಹೋಗುತ್ತಿದ್ದ ಜವಾಬ್ದಾರಿಯುತ ಹೆಣ್ಣು ಮಗಳಾಗಿದ್ದರು . ಕರ್ನಾಟಕಕ್ಕೆ ಯಶೋಧರಮ್ಮ ಅವರಂತಹ ಧೈರ್ಯವಂತ, ಬುದ್ಧಿವಂತ ಮಹಿಳೆಯ ಅವಶ್ಯಕತೆಯೂ ಅತಿ ಮುಖ್ಯವಾಗಿತ್ತು.

ಶಿವಪುರ ಧ್ವಜ ಸತ್ಯಾಗ್ರಹ :

ಕಾಂಗ್ರೆಸಿನ ಧ್ಯೇಯಗಳನ್ನು ಸಾಧಿಸಲು, ಜವಾಬ್ದಾರಿ ಸರ್ಕಾರವನ್ನು ರೂಪಿಸಲು ಆದಷ್ಟು ಬೇಗ ರಾಷ್ಟ್ರಕೂಟವನ್ನು ಸೇರಲು ಕಾಂಗ್ರೆಸ್ ಉದ್ದೇಶಿಸಿತ್ತು. ಇದರ ಸಂಬಂಧವಾಗಿ ಮೈಸೂರಿನಲ್ಲಿ ಸಾಹುಕಾರ್ ಚನ್ನಯ್ಯ ಅವರ ಮನೆಯಲ್ಲಿ ಪ್ರಮುಖ ಸಭೆ ಸೇರಿತು. (ಚನ್ನಯ್ಯ ಅವರನ್ನು ರಾಜಕೀಯ ರಂಗಕ್ಕೆ ಕರೆತಂದವರು ಯಶೋಧರಮ್ಮ ದಾಸಪ್ಪ ಅವರು) ಬೆಂಗಳೂರು- ಮೈಸೂರು ಹೆದ್ದಾರಿಯಲ್ಲಿ ಮದ್ದೂರಿನ ಬಳಿ ಇರುವ ಶಿವಪುರದಲ್ಲಿ, ಸಂಪೂರ್ಣ ಸಿದ್ಧತೆಯ ಜವಾಬ್ದಾರಿ ವೀರಣ್ಣಗೌಡರದಾಗಿತ್ತು. ಧ್ವಜ ಮೈದಾನ, ಬಹಿರಂಗ ಅಧಿವೇಶನ, ಸಭಾಂಗಣ ಇತ್ಯಾದಿ ಎಲ್ಲವೂ ನಿರ್ಮಾಣವಾಯಿತು .ದಿನಾಂಕ 10.04.1938ರ ವೇಳೆಗೆ ಜನರು ಊರೂರುಗಳಿಂದ ಬರಲಾರಂಭಿಸಿದರು. ಗಂಟೆ ಗಂಟೆಗೂ ಜನರ ಸಂಖ್ಯೆ ಹೆಚ್ಚುತ್ತಲೇ ಇತ್ತು. ಇದನ್ನು ಕಂಡ ಸರ್ಕಾರವು ಧ್ವಜಾರೋಹಣ ಮಾಡಬಾರದೆಂದು ಆಜ್ಞೆ ವಿಧಿಸಿತು. ಮಾರನೆಯ ದಿನ ಬೆಳಿಗ್ಗೆ 11.04.1938ರಂದು ಧ್ವಜಾರೋಹಣ ನಡೆಯಲೇಬೇಕು ಎಂದು ಸತ್ಯಾಗ್ರಹಿಗಳು ನಿರ್ಧಾರ ಮಾಡಿದರು.

ಶಿವಪುರದ ಅಧಿವೇಶನದ ಸ್ಥಳದಲ್ಲಿ ಮಧ್ಯರಾತ್ರಿಯ ವೇಳೆಗೆ 600 ಮಂದಿ ರಿಸರ್ವ್ ಪೋಲೀಸ್ ಹಾಗೂ 1000 ಜನ ಲಾಠಿ ಹಿಡಿದ ಪೋಲಿಸರು ಜಮಾ ಅಗಿದ್ದರು. ಧೈರ್ಯಗುಂದದ ನಾಯಕರು ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ ಮಾಡಲು ಸಜ್ಜಾದರು. ಪ್ರೇಕ್ಷಕರ ಹೊಳೆಯೇ ಹರಿದಿತ್ತು. ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯರವರು ವೇದಿಕೆ ಏರಿದ್ದೇ ತಡ, ಪೋಲಿಸ್ ಅಧಿಕಾರಿಗಳೆಲ್ಲ ಧ್ವಜ ಸ್ಥಂಭದ ಬಳಿಗೆ ಬಂದರು ಧ್ವಜದ ಹಗ್ಗ ಹಿಡಿದರು. ತಕ್ಷಣವೇ ಯಶೋಧರಮ್ಮ ದಾಸಪ್ಪ ಅವರು "ಪೋಲಿಸರು ಧ್ವಜದ ಹಗ್ಗವನ್ನು ಬಿಟ್ಟು ವೇದಿಕೆಯಿಂದ ಇಳಿದು ದೂರ ಸರಿದರೆ, ಜನರ ಉದ್ರೇಕ ಕಡಿಮೆಯಾಗುತ್ತದೆ. ಎಲ್ಲರೂ ಅವರವರ ಕಾರ್ಯ ನಿರ್ವಹಿಸಲು ಪೋಲಿಸರು ಸಹಕರಿಸಬೇಕು" ಎಂದು ಪ್ರಾರ್ಥಿಸಿಕೊಂಡರು. ಜನಸ್ತೋಮವೇ ನೆರೆದಿರುವುದನ್ನು ಕಂಡು ಅಧಿಕಾರಿಗಳು ಪೋಲಿಸರತ್ತ ಆಜ್ಞೆಯಿತ್ತರು. ಅದರಂತೆ ಪೋಲಿಸರೆಲ್ಲ ಹಿಂದಕ್ಕೆ ಸರಿದರು. ಧ್ವಜಾರೋಹಣ ಮಾಡಲು ಹೊರಟ ಟಿ.ಸಿದ್ದಲಿಂಗಯ್ಯ ಅವರನ್ನು ಪೋಲಿಸರು ದಸ್ತಗಿರಿ ಮಾಡಿದರು. ತಕ್ಷಣವೇ ಎಂ.ಎನ್. ಜೋಯಿಸರು ಆವೇಶದಿಂದ ನಾನು ಧ್ವಜಾರೋಹಣ ಮಾಡುತ್ತಿದ್ದೇನೆ ಎಂದು ಹೇಳುತ್ತಾ ಧ್ವಜದ ದಾರವನ್ನು ಎಳೆದು ಬಿಟ್ಟರು. ಪುಷ್ಪವೃಷ್ಟಿ ಮಾಡುತ್ತ ತ್ರಿವರ್ಣ ರಾಷ್ಟ್ರ ಧ್ವಜ ಹರಡಿಕೊಂಡಿತು. ತಕ್ಷಣವೇ ಟಿ. ಸುನಂದಮ್ಮ ಧ್ವಜ ಗೀತೆ ಹಾಡಿಯೇ ಬಿಟ್ಟರು. ಪೋಲೀಸರು ಮುಂದೆ ಬಂದು, ದಾಸಪ್ಪ ಅವರನ್ನು ದಸ್ತಗಿರಿ ಮಾಡಿದರು. ಮಹಾತ್ಮ ಗಾಂಧಿ ಅವರ ತತ್ವವನ್ನು ಅನುಸರಿಸಿದ ಜನ ಶಾಂತರಾಗಿಯೇ ಇದ್ದರು. ಇನ್ನು ಧ್ವಜವನ್ನು ಸಂಜೆಯವರೆಗೆ ಕಾಪಾಡಿಕೊಳ್ಳುವ ಜವಾಬ್ದಾರಿ ಸತ್ಯಾಗ್ರಹಿಗಳದಾಗಿತ್ತು.

ಧ್ವಜ ರಕ್ಷಣೆ : ಪೋಲಿಸರು ಧ್ವಜದ ಹತ್ತಿರ ಸುಳಿಯದಂತೆ ಧ್ವಜದ ಸುತ್ತಲೂ ಯಶೋಧರಮ್ಮ ದಾಸಪ್ಪ, ಟಿ. ಸುನಂದಮ್ಮ, ಬಳ್ಳಾರಿ ಸಿದ್ದಮ್ಮ, ಸುಬ್ಬಮ್ಮ ಜೋಯಿಸ ಮುಂತಾದವರು ಅನ್ನ ನೀರಿಲ್ಲದೆ ಬಿಸಿಲಿನಲ್ಲಿ ಸಂಜೆಯವರೆಗೆ ಕುಳಿತೇ ಬಿಟ್ಟರು. ಅವರ ಸುತ್ತಲೂ ಸ್ವಯಂ ಸೇವಕಿಯರು ಹಾಗೂ ಉಳಿದ ಕಾರ್ಯಕರ್ತರು ಕುಳಿತಿದ್ದರು. ಶಿವಪುರದ ಧ್ವಜಾರೋಹಣ ಯಾವ ಹಿಂಸಾತ್ಮಕ ಕೃತ್ಯಗಳೂ ಇಲ್ಲದೆ ಶಾಂತವಾಗಿ ನೆರವೇರಿತು. ಇದು ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದ ಮಹತ್ವ ಪೂರ್ಣವಾದ ಘಟನೆ, ಇದರಲ್ಲಿ ಯಶೋಧರಮ್ಮನ ಪಾತ್ರ ಹಿರಿದಾದುದು. ಉರಿಯುವ ಬಿಸಿಲಿನಲ್ಲಿ ನಿಂತು ಧ್ವಜ ರಕ್ಷಕಿಯಾಗಿ ಯಶೋಧರಮ್ಮ ಅವರು ಭಾಷಣ ಮಾಡಿ ತನ್ನ ಎರಡು ಗಂಡು ಮಕ್ಕಳನ್ನು ಕಟ್ಟಿಕೊಂಡು ಸಂಜೆಯವರೆಗೆ ಧ್ವಜ ರಕ್ಷಣೆ ಮಾಡಿದರು.

ಮರು ವರುಷ ಗೌರಿಬಿದನೂರಿನ ಬಳಿಯ ವಿದುರಾಶ್ವತ್ಥದಲ್ಲಿ ನಡೆದ ಕಾಂಗ್ರೇಸ್ ಅಧಿವೇಶನಕ್ಕೆ ಯಶೋದರಮ್ಮನವರ ಪತಿ ಎಚ್. ಸಿ. ದಾಸಪ್ಪನವರೇ ಅಧ್ಯಕ್ಷರು. ಈ ಅಧಿವೇಶನದಲ್ಲಿ ಹಿಂಸಾತ್ಮಕ ಘಟನೆಗಳು ನಡೆದು ಅನೇಕರು ಗೋಲಿಬಾರ್ಗೆ ತುತ್ತಾದರು. ಯಶೋಧರಮ್ಮ ಅವರ ಮಾಡಿದ ಭಾಷಣ ರಾಜದ್ರೋಹವೆಂದು



ಈಗಿನ ಶಿವಪುರ ಧ್ವಜ ಸತ್ಯಾಗ್ರಹ ಸೌಧ

ಮತ್ತು ದಾಸಪ್ಪ ಅವರು ಸರ್ಕಾರದ ವಿರುದ್ಧ ಧ್ವಜಾರೋಹಣ ಮಾಡಿದ್ದು ಅಪರಾಧವೆಂದು ಆರೋಪಿಸಿ ಅವರಿಬ್ಬರನ್ನೂ ದಸ್ತಗಿರಿ ಮಾಡಿ ಜೈಲಿಗೆ ಒಯ್ದರು.

ಮೈಸೂರಿನ ಯುವರಾಜ ಜಯಚಾಮರಾಜ ಒಡೆಯರ್ ಅವರ ವಿವಾಹ 1940ರಲ್ಲಿ ನಡೆದ ಸಂದರ್ಭದಲ್ಲಿ ಜೈಲಿನಲ್ಲಿ ಬಂಧಿತರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರನ್ನು ಬಿಡುಗಡೆ ಮಾಡಿದರು. ಆ ಸಮಯದಲ್ಲಿಯೇ ಯಶೋಧರಮ್ಮ ಮತ್ತು ದಾಸಪ್ಪ ಅವರೂ ಬಿಡುಗಡೆ ಹೊಂದಿದರು. 1942ರಲ್ಲಿ ಮಹಾತ್ಮ ಗಾಂಧೀಜಿ ಅವರು ಸ್ವಾತಂತ್ರ ಹೋರಾಟಕ್ಕೆ "ಮಾಡು ಇಲ್ಲವೆ ಮಡಿ' ಎಂಬ ಕರೆ ಕೊಟ್ಟರು. "ಬ್ರಿಟೀಷರೇ ಭಾರತವನ್ನು ಬಿಟ್ಟು ತೊಲಗಿ" ಎಂಬ ಕೂಗು ಎಲ್ಲೆಡೆ ಮೊಳಗಿತು. ಈ ಹೋರಾಟದಲ್ಲಿ ಪತಿ–ಪತ್ನಿ ಇಬ್ಬರನ್ನು ಸರ್ಕಾರ ಬಂಧಿಸಿ ಮತ್ತೆ ಸೆರೆಮನೆಗೆ ದೂಡಿತು.

ಕಾರಾಗೃಹದಲ್ಲಿದ್ದ, ತಮಗಿಂತ ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳಿಗೆ ಯಶೋಧರಮ್ಮ ಅವರು ಸಾಂತ್ವನ ಹೇಳಿ ಧೈರ್ಯ ತುಂಬಿ, ದೇಶ ರಕ್ಷಣೆಗಾಗಿ ಪ್ರತಿಯೊಬ್ಬರೂ ನಿರ್ವಹಿಸಬೇಕಿರುವ ಕರ್ತವ್ಯಗಳ ಬಗ್ಗೆ ತಿಳಿಯಪಡಿಸುತ್ತಿದ್ದರು. ಕಾರಾಗೃಹದಿಂದ ಬಿಡುಗಡೆಯಾದ ನಂತರ ಮದ್ರಾಸಿನಲ್ಲಿ ಹಿಂದಿ ಪ್ರಚಾರ ಸಭೆಯ ಬೆಳ್ಳಿಹಬ್ಬದಲ್ಲಿ ಪಾಲ್ಗೊಂಡರು. ಮಹಾತ್ಮರ ಒಂದೊಂದು ಮಾತನ್ನು ಭಕ್ತಿ ಪ್ರೇಮದಿಂದ ಸ್ವೀಕರಿಸಿದರು. ಒಬ್ಬ ಅಧ್ಯಾಪಕರ ಸಹಾಯದಿಂದ ಹಿಂದಿ ಭಾಷೆಯನ್ನು ಓದಿ ಬರೆಯಲು ಕಲಿತರು. ಹಿಂದಿ ಭಾಷೆಯಲ್ಲಿ ಮಾತನಾಡಲು ಕಲಿತು ಭಾಷಣ ಮಾಡಬಲ್ಲವರಾದರು. ಇದರಿಂದಾಗಿ ಮುಂದೆ ಅವರಿಗೆ ಇಡೀ ಭಾರತದ ಜನ ಸಂಪರ್ಕಕ್ಕೆ ಅನುಕೂಲವಾಯಿತು. 1947ರಲ್ಲಿ ಸ್ವಾತಂತ್ರ್ಯ ಬರುವ ತನಕವೂ ಯಶೋದರಮ್ಮನವರು ಗಾಂಧೀಜಿಯವರ ಮಾರ್ಗ ದರ್ಶನದಲ್ಲೇ ಸೇವಾಕಾರ್ಯ ನಿರತರಾದರು. ಅವರು ಉರ್ದು ಭಾಷೆ ಕಲಿಯಲು ಪಟ್ಟ ಶ್ರಮವನ್ನು ನೋಡಿ ಗಾಂಧೀಜಿ ಆಶ್ಚರ್ಯ ಪಟ್ಟರು.

ಸ್ವಾತಂತ್ರ್ಯದ ನಂತರ :

ಯಶೋಧರಮ್ಮ ಅವರು ಮೈಸೂರು ಸರ್ಕಾರದ ಸಚಿವ ಸಂಪುಟವನ್ನೇರಿದ ಪ್ರಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಪ್ರಥಮವಾಗಿ ಎಚ್. ಸಿ. ದಾಸಪ್ಪ ಅವರು ಕೆ.ಸಿ. ರೆಡ್ಡಿ ಅವರ ಮಂತ್ರಿಮಂಡಲದಲ್ಲಿ ಅರ್ಥ ಸಚಿವರಾದರು. ನಂತರ ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿಗಳಾದರು. ಹೆಚ್.ಸಿ. ದಾಸಪ್ಪ ಅವರು ಪ್ರಥಮ ಬಾರಿಗೆ ಮಂತ್ರಿ ಪದವಿಯನ್ನು ಅಲಂಕರಿಸಿದಾಗ ಯಶೋಧರಮ್ಮ ಅವರು ತಮ್ಮ ಸ್ವಂತದವರನ್ನೆಲ್ಲ ತಮ್ಮ ಮನೆಗೆ ಒಮ್ಮೆ ಊಟಕ್ಕೆ ಕರೆದು ಆತಿಥ್ಯ ನೀಡಿದರು. ಊಟದ ನಂತರ ಎಲ್ಲರನ್ನೂ ಉದ್ದೇಶಿಸಿ ದಾಸಪ್ಪ ಅವರು ಮಂತ್ರಿ ಪದವಿ ಯಲ್ಲಿ ಇರುವುದರಿಂದ ಅವರನ್ನು ಉಪಯೋಗಿಸಿಕೊಂಡು ಅವರ ಶಿಫಾರಸ್ಸಿಗಾಗಿಯಾಗಲಿ ಅಥವಾ ತಮ್ಮ ಅನುಕೂಲಗಳಿಗಾಗಲಿ ಪ್ರಯತ್ನಪಡಬಾರದೆಂದು ವಿನಂತಿಸಿಕೊಂಡರು.



ಸಮಾಜ ಕಲ್ಯಾಣ ಸಚಿವೆ ಯಶೋದರಮ್ಮ ಅವರು ಗೌರವ ರಕ್ಷೆ ಸ್ವೀಕರಿಸುತ್ತಿರುವುದು

ಯಶೋಧರಮ್ಮ ಅವರು 1950ರಲ್ಲಿ ಮೈಸೂರು ರಾಜ್ಯದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷೆಯಾಗಿ ನಂತರ ಹಾಸನದಿಂದ ಚುನಾವಣೆಯಲ್ಲಿ ಗೆದ್ದು ಗಾಂಧೀವಾದಿ ಎಸ್. ನಿಜಲಿಂಗಪ್ಪ ಅವರ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವೆಯಾದರು. ಅವರ ಆಡಳಿತ ಅವಧಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅನೇಕ ಕಾರ್ಯಗಳನ್ನು ಮಾಡಿದರು. ಅನೇಕ ಜನಪರ ಶೈಕ್ಷಣಿಕ ಸಾಮಾಜಿಕ, ಆರ್ಥಿಕ ಅನಾನುಕೂಲತೆಗಳನ್ನು ಒದಗಿಸಿದರು. "ನುಡಿದಂತೆ ನಡೆ' ಎಂಬ ಮಾತಿನಂತೆ ಕುಟುಂಬದಿಂದ ಮೂರು ದಿನದ ದಲಿತರ ಹೆಣ್ಣು ಮಗುವನ್ನು ದತ್ತು ಸ್ವೀಕರಿಸಿ ಮಗಳಾಗಿ ಸಾಕಿ ಸಲಹಿದರು.

ಸ್ವಾತಂತ್ರ್ಯಾನಂತರದ ಒಂದೂವರೆ ದಶಕಗಳಿಗೂ ಹೆಚ್ಚು ಕಾಲ ಜಾರಿಯಲ್ಲಿದ್ದ ಪಾನ ನಿಷೇಧ ಮಸೂದೆಯನ್ನು ರದ್ದುಗೊಳಿಸಬೇಕೆಂದು ಸಂಪುಟದಲ್ಲಿ ಚರ್ಚೆ ನಡೆಯಿತು. ಸಮಾಜ ಕಲ್ಯಾಣ ಸಚಿವೆಯಾಗಿದ್ದ ಯಶೋಧರಮ್ಮ ದಾಸಪ್ಪ ಅವರು ಈ ಮಸೂದೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ವಿಷಯದಲ್ಲಿ ಸಂಪುಟದಲ್ಲಿದ್ದ ಶೇ.50% ಕ್ಕೂ ಹೆಚ್ಚಿನ ಸಚಿವರಿಂದ ಬೆಂಬಲವೂ ಸಿಕ್ಕಿತ್ತು. ಆದರೆ ಹಣಕಾಸು ಹಾಗೂ ಅಬಕಾರಿ ಸಚಿವರಾಗಿದ್ದ ರಾಮಕೃಷ್ಣ ಹೆಗಡೆಯವರು "ಪಾನ ನಿಷೇಧ ಕಾಯಿದೆಯನ್ನು ಉಲ್ಲಂಘಿಸಿ ಕಾನೂನು ಬಾಹಿರವಾಗಿ ಮಧ್ಯ ಮಾರಾಟ ನಡೆಯುತ್ತಿದೆ. ರಾಜ್ಯದ ಗಡಿ ಭಾಗದವರು ಬೇರೆ ರಾಜ್ಯದಿಂದ ಮದ್ಯವನ್ನು ತಂದು ಕುಡಿಯುತ್ತಿದ್ದಾರೆ. ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ . ಆದ್ದರಿಂದ ಮದ್ಯಪಾನ ನಿಷೇಧ ರದ್ದುಗೊಳಿಸುವುದು ಅನಿವಾರ್ಯ " ಎಂದು ಪ್ರತಿಪಾದಿಸಿದರು.

ಇಡೀ ಜೀವಮಾನವನ್ನು ಗಾಂಧೀ ತತ್ವಗಳಿಗೆ ಅರ್ಪಿಸಿಕೊಂಡಿದ್ದ ಯಶೋಧರಮ್ಮ ದಾಸಪ್ಪ ಅವರು ಮದ್ಯಪಾನ ನಿಷೇಧದ ವಿರುದ್ಧ ಪ್ರತಿಭಟಿಸಿದರು. ಆದರೆ ಸಂಪುಟದ



ಸಭೆಯಲ್ಲಿ ಯಶೋಧರಮ್ಮ ಪರವಾಗಿ ಮಾತನಾಡಿದ್ದವರೆಲ್ಲ ಮೌನತಾಳಿದರು. ಗಾಂಧೀವಾದಿಯಾದ ಹಾಗೂ ಅಂದಿನ ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪನವರೇ ಅವರಿಗೆ ಬೆಂಬಲ ನೀಡದೇ ಇದ್ದುದರಿಂದ ಯಶೋಧರಮ್ಮ ದಾಸಪ್ಪ ಅವರು ಮನನೊಂದರು. ಗಾಂಧೀ ತತ್ವ ಪಾಲನೆಯ ನಿಷ್ಠಾವಂತ ಮಹಿಳೆ ಯಶೋಧರಮ್ಮ ದಾಸಪ್ಪ ತತ್ವ ಪಾಲನೆಯ ಸಲುವಾಗಿ ಮಂತ್ರಿ ಪದವಿಗೆ ರಾಜೀನಾಮೆ ಸಲ್ಲಿಸಿ ಸರ್ಕಾರಿ ವಸತಿಗೃಹವನ್ನು ತಕ್ಷಣವೇ ಖಾಲಿ ಮಾಡಿ ಸ್ವಗೃಹಕ್ಕೆ ಮರಳಿದರು .

ಮದ್ಯಪಾನ ನಿಷೇಧ ತೆಗೆದು ಹಾಕಿದ ವಿಚಾರದಲ್ಲಿ ಅದನ್ನು ಪ್ರತಿಭಟಿಸಿ ಯಶೋಧರಮ್ಮ ಅವರು ನಿಜಲಿಂಗಪ್ಪ ಅವರ ಸಂಪುಟಕ್ಕೆ ರಾಜೀನಾಮೆ ಕೊಟ್ಟಿದ್ದರೂ, ಅವರಿಬ್ಬರಲ್ಲಿನ ಪರಸ್ಪರ ವಿಶ್ವಾಸ ಮತ್ತು ಗೌರವಕ್ಕೆ ಯಾವ ಧಕ್ಕೆಯೂ ಇರಲಿಲ್ಲ. ಅವರ ಸಿದ್ಧಾಂತಗಳು, ನಂಬಿಕೆಗಳು, ಅಭಿಪ್ರಾಯಗಳು ಭಿನ್ನವಾಗಿರುತ್ತಿದ್ದವೇ ಹೊರತು, ಅವರಲ್ಲಿ ವೈಮನಸ್ಸುಗಳಿಗೆ ಆಸ್ಪದವಿರುತ್ತಿರಲಿಲ್ಲ. ಒಂದೇ ಪಕ್ಷದಲ್ಲಿ ಅವರು ಮತ್ತೆ ಅನ್ಯೋನ್ಯತೆಯಿ0ದ ಕೆಲಸ ಮಾಡುತ್ತಿದ್ದರು. ಇದು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಅತಿ ಅಮೂಲ್ಯ ನಡವಳಿಕೆ ಎಂದೇ ಪರಿಗಣಿಸಬಹುದು.

ಕಸ್ತೂರ್ಬಾ ಗಾಂಧಿ ಸ್ಮಾರಕ ಟ್ರಸ್ಟ ಸ್ಥಾಪನೆ ಕಸ್ತೂರ್ಬಾ ಅವರು ಆಗಾಖಾನ್ ಸೆರೆಮನೆಯಲ್ಲಿ ನಿಧನರಾದ ಮೇಲೆ ಅವರ ಹೆಸರಿನಲ್ಲಿ "ಕಸ್ತೂರಬಾ ಗಾಂಧಿ ಪ್ರತಿಷ್ಠಾನ'ವನ್ನು ಪ್ರಾರಂಭಿಸಲಾಯಿತು. ಪ್ರತಿಷ್ಠಾನದ ನಿಧಿ ಸಂಗ್ರಹಣಾ ಕಾರ್ಯದಲ್ಲಿ ಅಮೃತ ಲಾಲ್ ಥಕ್ಕರ್‌ರವರ ಸೇವೆ ಗಣನೀಯವಾದದ್ದು. ಥಕ್ಕರ್ ಪ್ರತಿಷ್ಠಾನದ 'ಬಾಪಾ' ಎಂದೇ ಹೆಸರುವಾಸಿಯಾಗಿದ್ದರು. ಗಾಂಧೀಜಿ ಯವರು ಅವರನ್ನು "ಪುಟ್ಟ ಮಹಾತ್ಮ' ಎಂದು ಕರೆಯುತ್ತಿದ್ದುದೂ ಉಂಟು. " ಕಸ್ತೂರಬಾ ಗಾಂಧಿ ಸ್ಮಾರಕ ಟ್ರಸ್ಟ್ " ನ್ನು ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಪ್ರಾರಂಭ ಮಾಡಲಾಯಿತು. ಸ್ವತಃ ಗಾಂಧೀಜಿ ಅವರೇ ಟ್ರಸ್ಟನ ಪ್ರಥಮ ಅಧ್ಯಕ್ಷರಾದರು. ಥಕ್ಕರ್ ಬಾಪಾರವರು ಪ್ರಧಾನ ಕಾರ್ಯದರ್ಶಿಗಳಾಗಿದ್ದು, ಸುಚೇತ ಕೃಪಲಾನಿ ಅವರು ಕಾರ್ಯದರ್ಶಿಗಳಾಗಿದ್ದು ಸೇವೆ ಸಲ್ಲಿಸಿದ್ದರು.

ಗಾಂಧೀಜಿ ಅವರ ಸೇವಾ ಗ್ರಾಮದಲ್ಲೇ ಹಲವು ಕಾಲ ನೆಲಸಿದ್ದ ಹೆಚ್.ಸಿ. ದಾಸಪ್ಪ ಹಾಗೂ ಯಶೋಧರಮ್ಮ ದಂಪತಿಗಳಿಗೆ ಪುನ: ಗಾಂಧೀಜಿ ಅವರಿಗಾಗಿ ಸೇವೆ ಸಲ್ಲಿಸುವ ಸದವಕಾಶ ದೊರೆಯಿತು. ಗಾಂಧೀಜಿ ಅವರು ಸ್ವತ: ತಾವೇ ಯಶೋಧರಮ್ಮ ಅವರನ್ನು "ಕಸ್ತೂರ್ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್' ಮೈಸೂರು ಶಾಖೆಗೆ ಪ್ರತಿನಿಧಿಯನ್ನಾಗಿ ನೇಮಿಸಿದರು. ಆಗ ಯಶೋಧರಮ್ಮ ಹಾಗೂ ದಾಸಪ್ಪ ದಂಪತಿಗಳ ಆಪ್ತರಾಗಿದ್ದ ಚಕ್ರವರ್ತಿ ಸಿ. ರಾಜಗೋಪಾಲಾಚಾರಿ ಅವರು ರಚನಾತ್ಮಕ ಕಾರ್ಯಕ್ಕೆ ದಾಸಪ್ಪ ಅವರ ಮನೋಧರ್ಮ ಹೊಂದಿಕೊಳ್ಳುತ್ತದೆ. ಆದರೆ ರಾಜಕಾರಣಕ್ಕೆ ತಕ್ಕ ದಿಟ್ಟತನ ಚಾಣಾಕ್ಷತೆ ಮತ್ತು ಲೋಕ ಜ್ಞಾನವಿರುವಂತಹ ಯಶೋಧರಮ್ಮ ಅವರಿಗೆ "ಕಸ್ತೂರ್ಬಾ ಸೇವಾ ಗ್ರಾಮದ' ಶ್ರಮದ ಜವಾಬ್ದಾರಿಯನ್ನು ಗಾಂಧೀಜಿ ಅವರು ವಹಿಸಿದರಲ್ಲ, ಏಕೆ ಹೀಗೆ ಮಾಡಿದರು? ಎಂದು ಆಶ್ಚರ್ಯ ಪಟ್ಟರು. ಅದಕ್ಕೆ ಬಾಪು ಅವರು " ಯಶೋಧರ ಬಹದ್ದೂರ್ ಹೆಣ್ಣು ಮಗಳು. ಅವರ ಸಾಮರ್ಥ್ಯದಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ. ಕಸ್ತೂರ್ ಬಾ ಟ್ರಸ್ಟ್ ಕಾರ್ಯಕ್ರಮಗಳನ್ನು ಅವರು ಜೀವ ಕೊಟ್ಟಾದರೂ ನಿಭಾಯಿಸಬಲ್ಲರು" ಎಂಬ ನಂಬಿಕೆಯ ಮಾತನಾಡಿದರು.

ರಚನಾತ್ಮಕ ಕಾರ್ಯಗಳು

ರಾಜಕೀಯವನ್ನು ತೊರೆದ ಯಶೋಧರಮ್ಮ ದಾಸಪ್ಪ ಅವರು ಹೆಣ್ಣು ಮಕ್ಕಳ ಹಾಗೂ ಮಹಿಳೆಯರ ಸ್ವಾವಲಂಬನೆ ಕಡೆಗೆ ಹೆಚ್ಚು ಗಮನ



ಅರಸೀಕೆರೆಯ ಕಸ್ತೂರ್ ಬಾ ಆಶ್ರಮದಲ್ಲಿ ಮಹಿಳಾ ಕಾರ್ಯಕರ್ತೆಯರ ಜೊತೆ ಯಶೋದರಮ್ಮ

ಕೊಟ್ಟರು. ಯಶೋಧರಮ್ಮ ಅವರು ಜವಾಬ್ದಾರಿಯುತ ಅನೇಕ ರಚನಾತ್ಮಕ ಕಾರ್ಯಗಳನ್ನು ಹೆಣೆದುಕೊಂಡರು. ಮಹಿಳೆಯರಿಗೆ ಖಾದಿ ನೂಲುವುದು, ಹೊಲಿಗೆ, ಕಸೂತಿ ಮುಂತಾದವುಗಳನ್ನು ಕಲಿಸಿದರು. ಹೆಣ್ಣುಮಕ್ಕಳಿಗಾಗಿ ಶಾಲೆಗಳು, ಕಿರಿಯರಿಗೆ ಬಾಲವಿಹಾರ ಮುಂತಾದವುಗಳನ್ನು ಸ್ಥಾಪಿಸಿದರು. ಪ್ರಸೂತಿ ಕೇಂದ್ರಗಳನ್ನು ಪ್ರಾರಂಭಿಸಿದರು. 'ಕಸ್ತೂರ್ಬಾ ಗ್ರಾಮ'ವನ್ನೇ ಸೃಷ್ಟಿಸುವ ಹುಮ್ಮಸ್ಸು ಅವರಲ್ಲಿತ್ತು. ಆದರೆ ಜಾಗದ ಅಭಾವ ಕಾಡುತ್ತಿತ್ತು. ಕೊನೆಗೆ ಅರಸೀಕೆರೆಯ ಹತ್ತಿರ ಪಾಳು ಬಿದ್ದಿದ್ದ 86 ಎಕರೆ ಸರ್ಕಾರದ ಜಮೀನನ್ನು ಕಂದಾಯ ಮಂತ್ರಿಗಳಾಗಿದ್ದ ಎಚ್. ಸಿದ್ದಯ್ಯ ಅವರಿಂದ ಪಡೆದು ಅಬಾದ್ದು ಮಾಡಿ ತೆಂಗಿನ ಸಸಿಗಳನ್ನು ನೆಟ್ಟು ಸಂಪನ್ಮೂಲದ ವ್ಯವಸ್ಥೆ ಮಾಡಿಕೊಂಡರು. ಅದರಂತೆ ಯಶೋಧರಮ್ಮ ಅವರು ರಾಜ್ಯದ ಇತರೇ ಭಾಗಗಳಲ್ಲಿದ್ದ ಇನ್ನಿತರೇ ಸೇವಾ ಕೇಂದ್ರಗಳಿಗೂ ಹತ್ತಾರು ಎಕರೆ ಜಮೀನನ್ನು ಪಡೆದು ಸ್ವಾವಲಂಬಿ ಕೇಂದ್ರಗಳನ್ನಾಗಿ ಮಾಡಿದರು. ಸರ್ಕಾರ ಹಾಗೂ ಸಾರ್ವಜನಿಕರ ಸಹಾಯದಿಂದ ಬೇಸಾಯಕ್ಕೂ ವ್ಯವಸ್ಥೆ ಮಾಡಿದರು.

ಗ್ರಾಮೀಣ ಮಹಿಳೆಯರ ಒಲವು :

ಗ್ರಾಮೀಣ ಮಹಿಳೆಯರ ಹಾಗೂ ಮಕ್ಕಳ ಕ್ಷೇಮಾಭಿವೃದ್ಧಿಗೆ ಅನೇಕ ಯೋಜನೆಗಳನ್ನು ಹಮ್ಮಿಕೊಂಡರು. ಸಂಬಳ ಕೊಡಲು ಹಣವಿಲ್ಲದ ಸಮಯದಲ್ಲಿ ತಮ್ಮ ಆಭರಣಗಳನ್ನು ಬ್ಯಾಂಕಿನಲ್ಲಿ ಇಟ್ಟು ಹಣ ತಂದು ಸಂಬಳ ವಿತರಣೆ ಮಾಡುತ್ತಿದ್ದರು. ಸೇವಾ ಕೇಂದ್ರಗಳು ಹೆಚ್ಚಿದಂತೆ ಓಡಾಟವೂ ಹೆಚ್ಚಾಯಿತು. ಆಗ ವಾಹನದ ಅಗತ್ಯತೆ ಅನಿವಾರ್ಯವಾಯಿತು. ಅದಕ್ಕಾಗಿ ಯಶೋಧರಮ್ಮ ಅವರು ತಮ್ಮ ಕೈಗಳಲ್ಲಿದ್ದ ಬಳೆಗಳನ್ನೇ ಮಾರಿ ವಾಹನ ಖರೀದಿ ಮಾಡಿದ್ದರು. ತಮ್ಮ ದತ್ತು ಪುತ್ರಿ ಪ್ರಭಾಳ ಮದುವೆಯನ್ನು ಒಬ್ಬ ವೈದ್ಯನ ಜೊತೆ ಕಸ್ತೂರಬಾ ಆಶ್ರಮದಲ್ಲಿ ನೆರವೇರಿಸಿದರು. ಅತಿಶಯವೆಂದರೆ ಈ ವಿವಾಹದಲ್ಲಿ ಸುಚೇತ ಕೃಪಲಾನಿ ಹಾಗೂ ಜೆ.ಬಿ ಕೃಪಲಾನಿ ಮತ್ತು ಅನೇಕ ಗಣ್ಯರು ಪಾಲ್ಗೊಂಡಿದ್ದರು.

ಅರಸೀಕೆರೆಯ ಕನ್ಯಾ ಆಶ್ರಮದಲ್ಲಿ (ಕಸ್ತೂರಬಾ ವಿದ್ಯಾಲಯ) ಓದುತ್ತಿದ್ದ ಸರೋಜ ಎಂಬ ಬಡ ಕುಟುಂಬದ ಹೆಣ್ಣುಮಗಳನ್ನು ತಮ್ಮ ಎರಡನೆಯ ಮಗ ತುಳಸಿದಾಸಪ್ಪನಿಗೆ, ಅದೇ ಕಸ್ತೂರಬಾ ಆಶ್ರಮದಲ್ಲಿ ಸರಳವಾಗಿ ಮದುವೆ ಮಾಡಿದರು. ದೊಡ್ಡ ಮನೆತನದಲ್ಲಿ ಹುಟ್ಟಿ ವಿಶಾಲವಾದ ಹೃದಯವುಳ್ಳ, ಸರಳ ಜೀವಿಯಾದ ಯಶೋಧರಮ್ಮ ಅವರ ನಿಸ್ವಾರ್ಥ, ತ್ಯಾಗ ಜೀವನವನ್ನು ನೋಡಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು "ಈ ದೇಶದಲ್ಲಿ ದೇವರೇ ಹುಟ್ಟಿ ಬಂದರೂ ಇಷ್ಟು ಕೆಲಸ ಮಾಡಲು ಸಾಧ್ಯವಿಲ್ಲ .ದೀನ ದಲಿತರ, ಸ್ತ್ರೀಯರ, ನಿರ್ಗತಿಕರ, ಮಕ್ಕಳ ಹಾಗೂ ಸಮಾಜ ಕಡೆಗಣಿಸಿದ ಎಲ್ಲರ ಸೇವೆಯನ್ನು ಮಾಡಿದ್ದಾರೆ" ಎಂದು ವರ್ಣಿಸಿ ಯಶೋಧರಮ್ಮ ಅವರನ್ನು "ಕರ್ನಾಟಕದ ಕಸ್ತೂರಬಾ " ಎಂದು ಕರೆದಿದ್ದಾರೆ.

ಗಾಂಧೀಜಿ ಅವರ ಸೇವಾಕಾರ್ಯಗಳನ್ನು ಸಮರ್ಥವಾಗಿ ಮುಂದುವರಿಸಿದ ಕೀರ್ತಿ ಯಶೋಧರಮ್ಮ ಅವರದ್ದಾಗಿದೆ. ಮೈಸೂರಿನ ಯಾದವಗಿರಿಯಲ್ಲಿ ಅಂಧ ಹೆಣ್ಣು ಮಕ್ಕಳಿಗೆ ಅನುಕೂಲವಾಗುವಂತೆ ವಸತಿ ಶಾಲೆಯನ್ನು ಸ್ಥಾಪಿಸಿ, ಅಲ್ಲಿ ಸಂಗೀತ ಮತ್ತೆ ಚಿತ್ರ ಕಲೆಯಲ್ಲಿ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಿದ್ದರು. ಯಶೋಧರಮ್ಮ ತಮ್ಮ ಸಂಸ್ಥೆಗಳ ಗುಣಮಟ್ಟ ಹೆಚ್ಚಿಸುವ ಹಾಗೂ ಅಭಿವೃದ್ಧಿ ಪಡಿಸುವ ಸದುದ್ದೇಶದಿಂದ ಆಗಾಗ ಪ್ರವಾಸವನ್ನು ಕೈಗೊಳ್ಳುತ್ತಿದ್ದರು. ಹೀಗೊಮ್ಮೆ ದಂಪತಿ ಸಮೇತರಾಗಿ ಕೀನ್ಯಾ ದೇಶಕ್ಕೆ ಹೋಗಿದ್ದರು. ಅಲ್ಲಿ ಕೀನ್ಯಾದ ರಾಷ್ಟ್ರಾಧ್ಯಕ್ಷ "ಜೈರೋ ಕೆನಾಟ' ಅವರನ್ನು ಭೇಟಿ ಮಾಡಿದ್ದರು. ಕೀನ್ಯಾ ಮಹಿಳಾ ಸೇವಾ ಸಂಸ್ಥೆಗಳನ್ನು, ಅಲ್ಲಿನ ಹೆಣ್ಣು ಮಕ್ಕಳು ತಯಾರಿಸಿದ ಕರಕುಶಲ ವಸ್ತುಗಳನ್ನು ವೀಕ್ಷಿಸಿ ಬಂದಿದ್ದರು.

ಹೆಣ್ಣು ಮಕ್ಕಳಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಸಲುವಾಗಿ ಗಡಿಯಾರ ಮತ್ತು ಟೆಲಿಫೋನ್ಗಳ ಬಿಡಿ ಭಾಗಗಳನ್ನು ತಯಾರಿಸುವ ಘಟಕಗಳನ್ನು ಸ್ಥಾಪಿಸಿದ್ದರು. ಇವರ ಸಾರ್ವಜನಿಕ ಸೇವಾ ಕಾರ್ಯವನ್ನು ಪರಿಗಣಿಸಿ ಭಾರತ ಸರ್ಕಾರ 1973 ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರಿಗೆ ಪ್ರಧಾನ ಮಾಡಿ ಗೌರವಿಸಿತು .

ಅರಸೀಕೆರೆಯ ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ 1947 ರಲ್ಲಿ ಪ್ರಾರಂಭ ಮಾಡಿದಾಗ ಯಶೋಧರಮ್ಮ ಅವರು "ತಮ್ಮ ತಲೆಯ ಮೇಲೆ ಕೈಯಿಟ್ಟು ತಮಗೆ ಆಶೀರ್ವಾದ ಮಾಡಿ ಎಂದು ಗಾಂಧೀಜಿ ಅವರನ್ನು ಕೇಳಿಕೊಂಡರು. "ಕೊನೆಯವರೆಗೂ ಇಲ್ಲೇ ಸೇವೆ ಮಾಡಿ ಮಡಿಯುವೆನೆಂದು ಮಾತು ಕೊಟ್ಟರೆ ಮಾತ್ರ ಆಶೀರ್ವಾದ ಮಾಡುವುದಾಗಿ" ಗಾಂಧೀಜಿ ಅವರು ಹೇಳಿದರು. ಅವರಿಂದ ಭಾಷೆ ತೆಗೆದುಕೊಂಡ ಗಾಂಧೀಜಿ ಅವರು ಯಶೋಧರಮ್ಮ ಅವರಿಗೆ ಆಶೀರ್ವಾದ ಮಾಡಿದ್ದರು. ಅದರಂತೆ ಯಶೋಧರಮ್ಮ



ಕೀನ್ಯಾ ಪ್ರವಾಸದಲ್ಲಿ ಯಶೋದರಮ್ಮ



ಅರಸೀಕೆರೆ ಆಶ್ರಮದಲ್ಲಿ ಯಶೋದರಮ್ಮನವರ ಸಮಾಧಿ

ಅವರು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿ ಕೊನೆಯವರೆಗೆ ಅಲ್ಲಿಯೇ ದುಡಿದರು. ಯಶೋಧರಮ್ಮ ಅವರು ಅಂತ್ಯಕಾಲದಲ್ಲಿ ಕ್ಯಾನ್ಸರ್ ಖಾಯಿಲೆಯಿಂದ ಬಹಳ ಬಳಲಿದರು. ಆದರೆ ಕೊನೆಯ ಉಸಿರಿನವರೆಗೂ ಅವರ ಹುಮ್ಮಸ್ಸು ಕುಂದಿರಲಿಲ್ಲ. ರಾಮನಾಮದಲ್ಲಿ ಭಕ್ತಿ ಹೆಚ್ಚು ಭಜನಾವಳಿಯು ಸದಾ ಪಕ್ಕದಲ್ಲಿ ಇರುತ್ತಿತ್ತು ರಾಮನಾಮವನ್ನು ಬರೆಯುತ್ತಿದ್ದರು. 1980ರ, ಜೂನ್ ಇಪ್ಪತ್ತರ ರಾತ್ರಿ (20–06–1980) ದೈವಾಧೀನರಾದರು. ಗಾಂಧೀಜಿ ಅವರ ಆಸೆಯಂತೆ ಕಸ್ತೂರಬಾ ಗ್ರಾಮದಲ್ಲೇ ಸಮಾಧಿಯಾದರು. ಹೆಣ್ಣು ಮಕ್ಕಳ ಅಭ್ಯುದಯಕ್ಕಾಗಿ ದುಡಿಯುತ್ತಿದ್ದ ಚೇತನ ನಿಶ್ಚೇತನವಾಯಿತು. ಅರಸೀಕೆರೆಯ ಆಶ್ರಮದಲ್ಲಿ ಅವರ ಸಮಾಧಿ ಮಾಡಲಾಗಿದೆ.

ಸಮಾಜ ಸುಧಾರಣಾವಾದಿ ಕೆ.ಹೆಚ್. ರಾಮಯ್ಯ ಅವರ ಸುಪುತ್ರಿಯಾಗಿ ಜನಾನುರಾಗಿ ಹೆಚ್.ಸಿ. ದಾಸಪ್ಪ ಅವರ ಧರ್ಮ ಪತ್ನಿಯಾಗಿ, ಗಾಂಧೀಜಿಯವರ ನೆಚ್ಚಿನ ಅನುಯಾಯಿಯಾಗಿ, ಸ್ವಾತಂತ್ರ್ಯ ಹೋರಾಟದ ನಾಯಕಿಯಾಗಿ, ನಿಷ್ಠಾವಂತ ಸಚಿವರಾಗಿ, ಮಮತಾಮಯಿ ತಾಯಿಯಾಗಿ, ಹಿಂದುಳಿದ ಜನಾಂಗದ ಹಾಗೂ ನಿರ್ಗತಿಕ ಮಹಿಳೆಯರ ಆಧಾರ ಸ್ತಂಭವಾಗಿ, ಎಲ್ಲಾ ಕ್ಷೇತ್ರಗಳಲ್ಲೂ ಲೋಪವಿಲ್ಲದೆ ತನ್ನ ಕರ್ತವ್ಯವನ್ನು ನಿರ್ವಹಿಸಿದ ಕನ್ನಡದ ದಿಟ್ಟ ಮಹಿಳೆ ಯಶೋಧರಮ್ಮ ದಾಸಪ್ಪನವರಾಗಿದ್ದಾರೆ.





ಅರಸೀಕೆರೆ ಆಶ್ರಮದಲ್ಲಿ 2016ರಲ್ಲಿ ದೆಹಲಿಯ ಗಾಂಧಿ ಸಮಾಧಿ (ರಾಜಘಾಟ್) ಮಾದರಿಯಲ್ಲಿ ಮರು ನಿರ್ಮಾಣಗೊಂಡಿರುವ ಗಾಂಧೀಜಿಯವರ ಚಿತಾಭಸ್ಮ ಇಟ್ಟಿರುವ ಸ್ಥಳ .

ಅರಸೀಕೆರೆ ಕಸ್ತೂರ್‌ಬಾ ಗಾಂಧಿ ಆಶ್ರಮ

ಅರಸೀಕೆರೆಗೆ 3 ಕಿ.ಮೀ. ದೂರದಲ್ಲಿ ಮೈಸೂರು ರಸ್ತೆಯಲ್ಲಿ 1947ರಲ್ಲಿ ಸ್ಥಾಪಿತವಾದ ಕಸ್ತೂರ್ ಬಾ ಗಾಂಧೀ ಆಶ್ರಮ ' ಕರ್ನಾಟಕದ ಸಬರಮತಿ' ಆಶ್ರಮವೆಂದೇ ಪ್ರಖ್ಯಾತವಾಗಿದೆ. ಆಚಾರ್ಯ ವಿನೋಭಾ ಭಾವೆ ಅವರು ಇಲ್ಲಿ ಶಿಬಿರಗಳನ್ನು ಮಾಡಿದ್ದರೆಂದು ದಾಖಲೆಗಳು ಹೇಳುತ್ತವೆ. ಲೋಕನಾಯಕ ಜಯಪ್ರಕಾಶ್ ನಾರಾಯಣ್ ಉತ್ತರ ಪ್ರದೇಶದ ಮೊದಲ ಮಹಿಳಾ ಮುಖ್ಯಮಂತ್ರಿ ಆದ ಸುಚೇತನ ಕೃಪಲಾನಿ, ಶಿಕ್ಷಣ ಸಚಿವರಾಗಿದ್ದ ಜೆ.ಬಿ. ಕೃಪಲಾನಿ, ಕಸ್ತೂರ್ ಬಾ ಗಾಂಧೀ ಆಶ್ರಮದ ಸಂಸ್ಥಾಪಕ ಕಾರ್ಯದರ್ಶಿ ಟಕ್ಕರ್ ಬಾಪ್ ಮುಂತಾದ ಗಣ್ಯರು ಭಾಗವಹಿಸಿದ್ದ ಪವಿತ್ರವಾದ ಸ್ಥಳ ಇದಾಗಿದೆ.

ಕೇಂದ್ರ ರೈಲ್ವೆ ಸಚಿವರಾಗಿದ್ದಾಗ ಹೆಚ್.ಸಿ.ದಾಸಪ್ಪ ಅವರು ದಿನಾಂಕ. 30–01–1948 ರಂದು ಸಂಜೆ 5–00 ಗಂಟೆಗೆ ಇನ್ನೂ ಪ್ರಾರ್ಥನಾ ಸಭೆಯಲ್ಲಿದ್ದರು. ಗಾಂಧೀಜಿಯವರು ಹಂತಕರ ಗುಂಡಿಗೆ ಬಲಿಯಾದಾಗ ಅದರ ಶಬ್ಧ ಕೇಳಿ ದಾಸಪ್ಪ ಅವರು ಅಲ್ಲಿಗೆ ಧಾವಿಸಿದರು. ಅಲ್ಪ ಸ್ವಲ್ಪ ಪ್ರಾಣವಿರಬಹುದೆಂದು ಕುಸಿದು ಬಿದ್ದಿದ್ದ ಗಾಂಧೀಜಿ ಅವರಿಗೆ ತಕ್ಷಣವೇ ಪಕ್ಕದಲ್ಲಿದ್ದ ನೀರಿನ ಬಾಟಲಿಯ ಮುಚ್ಚಳದಿಂದ ಎರಡು ತೊಟ್ಟು ನೀರು ಹಾಕಿದರು. ಇದು ದಾಸಪ್ಪ ಅವರು ಮಹಾತ್ಮರಿಗೆ ಸಲ್ಲಿಸಿದ ಅಂತಿಮ ಸೇವೆ. ಈ ಮುಚ್ಚಳವನ್ನು ಜೋಪಾನವಾಗಿ ತಂದು ಯಶೋಧರಮ್ಮ ಅವರಿಗೆ ಕೊಟ್ಟರು. ಮುಂದೆ ಗಾಂಧೀಜಿ ಅವರ ಚಿತಾಭಸ್ಮವನ್ನು ದೆಹಲಿಯಿಂದ ಅರಸೀಕೆರೆ ಕಸ್ತೂರ್ಬಾ ಆಶ್ರಮಕ್ಕೆ ತಂದಾಗ, ಗಾಂಧೀಜಿ ಅವರಿಗೆ ಎರಡು ತೊಟ್ಟು ನೀರು ಕುಡಿಸಿದ ಆ ಮುಚ್ಚಳವನ್ನು ಅದರ ಜೊತೆ ಇಟ್ಟು ಸ್ಮಾರಕ ನಿರ್ಮಾಣ ಮಾಡಲಾಯಿತು.

2016ರಲ್ಲಿ ಗಾಂಧೀಜಿಯ ಅನುಯಾಯಿಗಳೂ ಹಾಗೂ ಮಾಜಿ ಮಂತ್ರಿಗಳಾಗಿದ್ದ ಎಂ. ಚಂದ್ರಶೇಖರ್ ಅವರ ಧರ್ಮ ಪತ್ನಿ ಸರೋಜಮ್ಮ, ಮಗ ಎಂ.ಸಿ. ನರೇಂದ್ರ ಮತ್ತು ಕುಟುಂಬದವರು ಅರಸೀಕರೆಯಲ್ಲಿ ಗಾಂಧೀಜಿ ಅವರ ಸ್ಮಾರಕವನ್ನು ನಿರ್ಮಾಣ ಮಾಡಿ, ರಾಷ್ಟದ ಎರಡನೇ ರಾಜ್ಘಾಟ್ ಆಶ್ರಮವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿಸಿದ್ದಾರೆ.

■



ಗಾಂಧಿ ಮತ್ತು ಕರ್ನಾಟಕ

ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **"ಗಾಂಧಿ ಮತ್ತು ಕರ್ನಾಟಕ"** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ಇದರ ಮೊದಲ ಕಂತು ಪ್ರಕಾಶಕರ ಮಾತುಗಳು ಮತ್ತು ಪ್ರಾಸ್ತಾವಿಕ ಅಧ್ಯಾಯ ಈ ಸಂಚಿಕೆಯಲ್ಲಿ ಪ್ರಕಟವಾಗುತ್ತಿದೆ.

ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲೆ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ದವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.

ಡಾ. ಹೋ. ಶ್ರೀನಿವಾಸಯ್ಯ

ಅಂದಿನ ಭಾರತದ ಸ್ಥಿತಿಗತಿ :

ಭಾರತ ದೇಶ ಪ್ರಧಾನವಾಗಿ ಕೃಷಿಯ ದೇಶ. ಇಲ್ಲಿನ ಶೇಕಡ 80 ರಷ್ಟು ಜನರು ಬೇಸಾಯದ ಮೇಲೆ ಅವಲಂಬಿಸಿದ್ದಾರೆ. ಇಲ್ಲಿ ವ್ಯವಸಾಯವೇ ಮುಖ್ಯ ವೃತ್ತಿ. ಬೇಕಾದಷ್ಟು ಭೂಮಿ ಯಥೇಚ್ಛವಾದ ಕಾಡು, ಸಾಕಷ್ಟು ದನಕರು, ಕುರಿ–ಮೇಕೆ, ಚಿಕ್ಕಪುಟ್ಟ ಕೈಗಾರಿಕೆಗಳು ಇಲ್ಲಿ ಇದ್ದವು .ಧನ ಧಾನ್ಯ ಸಮೃದ್ಧಿ ಇತ್ತು. ಭಾರತವನ್ನು ವರ್ಣಿಸಿದ ಕವಿ, ಅತ್ಯಾಧುನಿಕ ಕೂಡ, **"**ಸುಜಲಾಂ ಸುಫಲಾಂ ಮಲಯಜ ಶೀತಲಾಂ ಸಸ್ಯ ಶ್ಯಾಮಲಾಂ**"** ಎಂದ. ಇಷ್ಟೆಲ್ಲ ಇದ್ದ ಮೇಲೆ ದೇಶ ಸುಹಾಸಿನೀ ಸುಮಧುರಭಾಷಿಣೀ ಆಗಲೇಬೇಕು ತಾನೆ! ಆಗಿತ್ತು.

ಹಿಂದೆ ಎಂದೋ ಆಗಿ ಹೋದ ಮಾತಲ್ಲ ಇದು. ಸ್ವರಾಜ್ಯ ಬರುವ ಮೊದಲು ನೂರು– ನೂರೈವತ್ತು ವರ್ಷಗಳ ಕೆಳಗೆ ಇನ್ನೂ ಇತ್ತೀಚೆಗೆ ದೇಶ ಹೀಗೆ ಇತ್ತು. ಇದರಲ್ಲಿ ಯಾವುದೂ ಅತಿಶಯೋಕ್ತಿ ಅಲ್ಲ. ದೇಶದ ಆರ್ಥಿಕ ವ್ಯವಸ್ಥೆಯ ಆರಂಭ ವ್ಯವಸಾಯ, ಕೃಷಿ. ನಮ್ಮ ರೈತರು ಸುಸಂಸ್ಕೃತರು, ಧರ್ಮಪಾರಾಯಣರು . ವೀರ್ಯವಂತರು. ಆದರೂ ಅವರ ಐಹಿಕ ಇಚ್ಛೆ ಬಹಳ ಪರಿಮಿತ. ರಾಜಕಾರಣದಲ್ಲಿ ಅವರಿಗೆ ಆಸಕ್ತಿ ಕಡಿಮೆ. ರಾಜ್ಯಾಧಿಕಾರ ಯಾರ ಕೈಯಲ್ಲಿ ಎಂಬ ಚಿಂತೆ ಅವರಿಗೆ ಇರಲಿಲ್ಲ. ರಾಜರು ಯಾರಾದರೇನು? ರಾಗಿ ಬೀಸುವುದು ನಮಗೆ ತಪ್ಪದು ಎಂಬ ಮನೋಧರ್ಮ ಅವರದು. ಇಂಥವರಿಗೆ ಉದ್ಯೋಗಲಾಭ ಬೇಕಿದ್ದಿತೆ?

ವ್ಯವಸಾಯ ಅವರ ಪಾಲಿಗೆ ಉದ್ಯೋಗ ಆಗಿರಲಿಲ್ಲ. ಅವರಿಗೆ ಅದೊಂದು ಜೀವನ ಧರ್ಮ, ಪರಂಪರಾಗತವಾಗಿ ಬಂದ ಒಂದು ಕರ್ತವ್ಯಕರ್ಮ ಗ್ರಾಮಜೀವನ ಅವರಿಗೆ ಒಂದು ಜೀವನದ ರೀತಿ, ಭೂಮಿ ಅವರ ಪಾಲಿಗೆ ತಾಯಿ. ಆಕೆಯ ಸೇವೆಮಾಡಿ, ಆಕೆಯನ್ನು ತಣಿಯಿಸಿ ಅಭಿಮಾನದಿ0ದ ಆಕೆ ನೀಡಿದುದರಲ್ಲಿ ತೃಪ್ತರಾಗಿದ್ದ ಜನರು ಭಾರತೀಯರು.

ಭಾರತದ ಗ್ರಾಮ ಸಂಸ್ಕೃತಿ :

ಪಟ್ಟಣಗಳು ನಮ್ಮಲ್ಲಿ ಇರಲಿಲ್ಲ ಎಂದಲ್ಲ. ಅಲ್ಲೊಂದು ಇಲ್ಲೊಂದು ರಾಜಧಾನಿ, ಪಟ್ಟಣ ಇದ್ದರೂ ಜೀವನ ಸಮಸ್ತವೂ ಗ್ರಾಮಾಭಿಮುಖ ಆಗಿತ್ತು. ಈಗಿನಂತೆ ಜೀವನ ರಾಜಕಾರಣ ಪ್ರಧಾನ, ನಗರಾಭಿಮುಖ ಆಗಿರಲಿಲ್ಲ. ನಗರಗಳಲ್ಲಿ ದೇಶದ ಸಂಪತ್ತಾಗಲಿ, ಅಧಿಕಾರ ಆಗಲಿ ಕೇಂದ್ರೀಕೃತ ಆಗಿರಲಿಲ್ಲ. ಆಗಿನ ಮೂವತ್ತು ಕೋಟಿ ಭಾರತೀಯರೂ ಸ್ವಚ್ಛಂದ ಪ್ರವೃತ್ತಿಯವರು. ಅವರ ಮನೋಧರ್ಮ ಸ್ವತಂತ್ರ. ಹಳ್ಳಿಹಳ್ಳಿಯೂ ಒಂದು ಸ್ವತಂತ್ರ ಗಣತಂತ್ರ, ವ್ಯಾಪಾರ, ಉದ್ಯೋಗ ಯಾವುದರಲ್ಲೂ ರಾಜಕೀಯ ಬಂಧನ ಇರಲಿಲ್ಲ. ಒಳನಾಡಿನ ವ್ಯಾಪಾರದಲ್ಲಿ ವಿನಿಮಯವೇ ಹೆಚ್ಚು ರೈತರಲ್ಲಿ ದುಡ್ಡು ಕಡಿಮೆ. ದುಡ್ಡಿನ ವ್ಯಾಮೋಹವೂ ಕಡಿಮೆ. ಧಾನ್ಯ ಹೆಚ್ಚು ಊರ ಮುಂದಿನ ಹಗೇವುಗಳು, ಮನೆಗಳಲ್ಲಿನ ಕಣಜ–ಪಣತಗಳು ಸದಾ ತುಂಬಿರುತ್ತಿದ್ದುವು.

ಇದೆಲ್ಲಕ್ಕೂ ಆಧಾರವಾದ ಭೂಮಿಯನ್ನು ಸೊತ್ತು ಎಂದುಕೊಂಡವರು ಇರಲೇ ಇಲ್ಲ. ಈ ಹೊಲ ನನ್ನದು, ಇದು ನನ್ನ ಸೊತ್ತು ಎನ್ನುವ ಭಾವನೆ ಜನರಲ್ಲಿ ಇರಲಿಲ್ಲ. ಸ್ಥಿರ–ಚರ ಸೊತ್ತುಗಳ ಅಭಿಮಾನ ಎಲ್ಲವೂ ಈಚಿನದು. ರಾಜಕಾರಣದ ಅನುಗ್ರಹ ಅದು. ರೈತನಿಗೆ ಬೇಕಾಗಿದ್ದದ್ದು "ವಿನಾದೈನ್ಯೇನ ಜೀವನಂ **"** . ಕನ್ನಡ ನಾಡಿನ ಮಹಾಕವಿ ಸರ್ವಜ್ಞ ಇದನ್ನೇ ತನ್ನ ರಸವಾಣಿಯಲ್ಲಿ ಹೇಳಿದ್ದಾನೆ.

"ಹಚ್ಚನೆಯ ಹೊಲವಾಗೆ,
ಬೆಚ್ಚನೆಯ ಮನೆಯಾಗೆ,
ಇಚ್ಛೆಯನರಿತು ನಡೆವ ಸತಿಯಾಗೆ
ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ'

ಇದು ಎಲ್ಲವೂ ಈ ಶತಮಾನದಲ್ಲಿ ತಲೆಕೆಳಗು ಆಗಿದೆ. ಗ್ರಾಮ ಜೀವನ ಈಗ ನಮ್ಮ ವೈಶಿಷ್ಟ್ಯ ಅಲ್ಲ. ವಿನಿಮಯವೂ ಇಲ್ಲ. ಹಿಂದಿನ ಕಾಲದ ಹಳ್ಳಿಗಳೂ ಇಲ್ಲ. ಹಳ್ಳಿಗರೂ ಇಲ್ಲ. ವ್ಯವಸಾಯವನ್ನು ನಂಬಿ ಆಸ್ತಿಕರಾಗಿ ಅಲ್ಲಿ ಸಲ್ಲಬೇಕಾದರೆ "ಇಲ್ಲಿ ಸಲ್ಲಬೇಕು**"** ಎಂದು, ಜೀವನಕ್ಕೆ ನೀತಿಯೇ ಧರ್ಮವೇ ನೆಲೆಗಟ್ಟು ಎಂದು ತಿಳಿದು ನಡೆಯುತ್ತಿದ್ದ ಆ ಜನ ಈಗ ಇಲ್ಲ.

ಸಾವಿರಾರು ವರ್ಷ ಇದ್ದ ತೃಪ್ತಿ ಆಸ್ತಿಕತೆ, ಶ್ರದ್ಧೆ, ಅನಾಸಕ್ತ ಮನೋಧರ್ಮ ಜನರಲ್ಲಿ" ಇಂದು ಬಹಳ ಮಟ್ಟಿಗೆ ಉರುಳಿ ಹೋಗಿವೆ. ಉದ್ಯೋಗ ಉದ್ಯೋಗ ಎಂದು ದೇಶ ಹಂಬಲಿಸುತ್ತಿದೆ . ಹಣ ಹಣ ಎಂದು ಹೆಣವೂ ಬಾಯಿ ಬಿಡುತ್ತಿದೆ. ಹಳ್ಳಿಗಳಲ್ಲಿ ಹಿಂದೆ ಇದ್ದ ಪ್ರಶಾಂತಿ ಈಗ ಇಲ್ಲ. ಹಳ್ಳಿಗಳಲ್ಲಿ ಇರಲು ಹುಡುಗರಿಗೆ ಯಾರಿಗೂ ಮನಸಿಲ್ಲ. ಮನಸ್ಸು ಇದ್ದರೂ ಇರುವುದು ಸಾಧ್ಯ ಇಲ್ಲ. "ಕುರಿತು ಓದದೆಯೆ ಪರಿಣತ ಮತಿಗಳ್' ಆಗಿದ್ದ ನಾವು ಇವತ್ತು ಕುರಿತು ಓದಿಯೂ ಕೂಡ ಭ್ರಾಂತಮತಿಗಳಾಗಿದ್ದೇವೆ.

ಈ ದೇಶ ಎಂದು ಸರ್ವತಂತ್ರ ಸ್ವತಂತ್ರ ಆಗಿತ್ತೋ ಸಾರ್ವಭೌಮ ಆಗಿತ್ತೋ ಈಗ ನಮಗಂತೂ ನೆನಪೇ ಇಲ್ಲ. ಯಾರೋ ಪಾಳೆಯಗಾರರು ಇದ್ದರು, ಯಾರೋ ರಾಜರು ಇದ್ದರು, ಅವರು ಪರಸ್ಪರ ಕಚ್ಚಾಡಿದರು ಎನ್ನುತ್ತದೆ ಇತಿಹಾಸ. ನಮ್ಮ ನಮ್ಮ ಜಗಳದಲ್ಲಿ ನಾವು ಪರರ ಗುಲಾಮರೂ ಆದೆವು ಎಂಬ ಮಾತನ್ನು ನಮ್ಮ ಇತಿಹಾಸವೂ ಸರಿಯಾಗಿ ನೇರಾಗಿ ತಿಳಿಸುವುದಿಲ್ಲ. ಅದು ನಮ್ಮ ಇತಿಹಾಸವೇ ಅಲ್ಲವಲ್ಲ. ನಾವು ಬರೆದುಕೊಂಡದ್ದೇ ಅಲ್ಲ. ಅದು ನಮ್ಮನ್ನು ಗೆದ್ದವರ ಇತಿಹಾಸದ ಒಂದು ಮಾದರಿ. ನಮ್ಮವರೇ ಒಂದು ವೇಳೆ ಅದನ್ನು ಬರೆದಿದ್ದರೂ ಯಾರೋ ಹೇಳಿ ಬರೆಯಿಸಿದಂತೆ ಇದೆ. ಬರೆಸುವವರು ಒಬ್ಬರು ಬೇರೆ ಇದ್ದಾಗ, ಬರವಣಿಗೆ ಯಾರ ಕೈಯಿನದು ಆದರೆ ಏನು? ಭಾರತವನ್ನು ಬರೆದದ್ದು ಗಣಪತಿ. ಆದರೆ ಭಾರತ ವ್ಯಾಸಸ್ತೋತ್ರ. ಸ್ವಾತಂತ್ರ್ಯಾನಂತರ .

ನಮ್ಮ ದೇಶ ಸ್ವತಂತ್ರ ಎನಿಸಿಕೊಂಡು 1967ಗೆ ಇಪ್ಪತ್ತು ವರ್ಷ ಆಗಿ ಹೋದವು. ಏನು ಸ್ವಾತಂತ್ರ್ಯವೋ! ರಾಜರು ಬದಲು ಆದರು, ರಾಜ್ಯ ನಮ್ಮ ಕೈಗೇ ಬಂತು. ರಾಜ್ಯಭಾರ ಮಾತ್ರ ಹಿ0ದಿನಂತೆಯೆ ಇದೆ. ಸ್ವಲ್ಪವೂ ಬದಲಾವಣೆ ಆಗಲಿಲ್ಲ. ಇದಕ್ಕೆ ಕಾರಣ ನಮ್ಮದನ್ನು ಬಿಟ್ಟು ನಾವು ಪರರ ದಾರಿ ಹಿಡಿದದ್ದೇ. ಬರೀ ದಾರಿ ಹಿಡಿಯಲಿಲ್ಲ. ಅವರ ಕಾಲನ್ನೇ ಹಿಡಿದೆವು. ನಮ್ಮ ದೇಶದಲ್ಲಿ ಮೊಗಲರು ನೂರಾರು ವರ್ಷ ರಾಜ್ಯಭಾರ ಮಾಡಿದರು. ದೀರ್ಘಕಾಲ ನಮ್ಮ ದೇಶದಲ್ಲಿ ನಡೆದ ವಿದೇಶಗಳ ರಾಜ್ಯ ಅದೇ. ಅವರೂ ಹೊರಗಿನಿಂದ ಬಂದವರೇ. ಆದರೂ ನಮ್ಮ ಸಮಾಜರಚನೆ, ಗ್ರಾಮಜೀವನ ವಿಧಾನ ಇವುಗಳಲ್ಲಿ ಗಮನಾರ್ಹ ವ್ಯತ್ಯಾಸ ಆಗ ಆಗಲಿಲ್ಲ. ಅದೇ ಇಂಗ್ಲಿಷರು ಬಂದರು. ಬರುವಾಗ ಸಾಹುಕಾರರಂತೆ ಬಂದರು. ಆಮೇಲೆ ಸಾಮ್ರಾಜ್ಯ ಕಟ್ಟಿದರು. ಅವರ ರಾಜ್ಯಭಾರ ನಡೆದದ್ದು ನೂರೈವತ್ತು ವರ್ಷ, ಆದರೂ ನಮ್ಮದು ಎಂಬುದು ಎಲ್ಲವೂ ಅಳಿದು ಹೋಯಿತು ಎನ್ನಬೇಕು,

ನಮ್ಮದು ದೈವ ಧರ್ಮಗಳನ್ನು ನಂಬಿದ ಸೀಮೆ. ಜನಸಾಮಾನ್ಯರಲ್ಲಿ ಸಮಾನತೆ ಬೆಳಗಿದ ಸೀಮೆ. ತಿಳಿದೂ ತಿಳಿಯದ ಹಾಗೆ ನಮ್ಮದು ಎಂಬ ವೈಶಿಷ್ಟ್ಯ ಎಲ್ಲವೂ ಅಳಿದು ಹೋಯಿತು ಇಂಗ್ಲಿಷರ ಕಾಲದಲ್ಲಿ. ಅವರನ್ನು ಅನ್ನುವ ಹಾಗೂ

ಇರಲಿಲ್ಲ. ಅವರ ಭೋಗ ಭಾಗ್ಯದ ನಾಗರಿಕತೆಗೆ, ಅವರ ಲಾಭದ ದೃಷ್ಟಿಗೆ ಮರುಳಾಗಿ ನಾವೇ ನಮ್ಮ ಸಂಸ್ಕೃತಿಯನ್ನು ಗಾಳಿಗೆ ತೂರಿಕೊಂಡೆವು. ಅಷ್ಟು ಸೂಕ್ಷ್ಮ ಆ ಕೈವಾಡ. ನಾಲ್ಕೂ ರೀತಿಯಲ್ಲೂ ನಾವು ದಿವಾಳಿ ತೆಗೆದೆವು. ಆಧ್ಯಾತ್ಮಿಕ ಆಗಿ, ಬೌದ್ಧಿಕ ಆಗಿ, ನೈತಿಕ ಆಗಿ ಆರ್ಥಿಕ ಆಗಿ ನಾಲ್ಕು ಬಗೆಯಲ್ಲೂ ಹಾನಿ ಮಾಡಿಕೊಂಡೆವು. ಗಾ0ಧೀಜಿ ಈ ಮಾತನ್ನು ಒತ್ತಿ ಹೇಳಿದ್ದಾರೆ. ಇಂಗ್ಲಿಷರ ರಾಜಕೀಯ, ಪಾಶ್ಚಾತ್ಯ ಸಂಸ್ಕೃತಿಯ ಮೆರುಗು, ನಮ್ಮ ವ್ಯಾಮೋಹ ಇವೆಲ್ಲ ತ್ರಿದೋಷಗಳು ನಮ್ಮನ್ನು ರಸಾತಳಕ್ಕೆ ಒಯ್ದುಬಿಟ್ಟವು.

ಸಹಕಾರದ ಆಧಾರದ ಮೇಲೆ ನಮ್ಮ ಸಮಾಜ ರಚಿತ ಆಗಿತ್ತು. ನಮ್ಮ ಮದುವೆ–ಮುಂಜಿ, ಹಬ್ಬ–ಹರಿದಿನ ಎಲ್ಲವೂ ಸಾಂಘಿಕ ಸಮಾರಂಭಗಳು, ಅದರಲ್ಲಿ ಯಾಜಮಾನ್ಯ ವ್ಯಕ್ತಿಯದಲ್ಲ, ಸಮಾಜದ್ದು. ನಮ್ಮ ಗುಲಾಮಗಿರಿಯಲ್ಲಿ ನಾವು ಮೊಟ್ಟಮೊದಲು ಕಳೆದುಕೊಂಡದ್ದು ನಮ್ಮ ಕೈಗಾರಿಕೆ, ಕೌಶಲ. ಯಾವ ಕೈಗಾರಿಕೆ ಇಡೀ ಜಗತ್ತಿನಲ್ಲೇ ಅಹಿಂಸೆಯ ದಾರಿಯಲ್ಲಿ ನಮ್ಮ ಧರ್ಮ, ಸಂಸ್ಕೃತಿಗಳನ್ನು ಹರಡಿತ್ತೋ, ಯಾವುದು ನಮಗೆ ಅಗ್ರಸ್ಥಾನವನ್ನು ತಂದುಕೊಟ್ಟಿತ್ತೋ ಅದನ್ನೇ ನಾವು ಕಳೆದುಕೊಂಡೆವು. ನಮ್ಮ ಸಮಾಜದ ಆಧಾರ ಆಗಿದ್ದ ಕೃಷಿಯಲ್ಲಿ ಸ್ಪರ್ಧೆ ಲಾಭದ ಆಶೆ ಪ್ರವೇಶ ಮಾಡಿದವು, ಭೂಮಿ ಸೊತ್ತು ಆಯಿತು. ದುಡ್ಡಿಗಾಗಿ ಕೆಲಸ ಮಾಡುವ ರೂಢಿ ಬಂತು. ದುಡಿಯುವವರದೇ ಒಂದು ವರ್ಗ ಆಯಿತು. ಶ್ರೀಮಂತರದೇ ಒಂದು ವರ್ಗ ಆಯಿತು. ಹೀಗೆ ವರ್ಗೀಕರಣ ಪ್ರಾರಂಭ ಆಯಿತು ನಮ್ಮಲ್ಲಿ ದುಡ್ಡಿನ ತಳ ಹದಿಯ ಮೇಲೆ.

ಈ ಆರ್ಥಿಕ ವರ್ಗೀಕರಣದ ಜೊತೆಗೆ ಮತ್ತೊಂದು ಆಯಿತು–ಕಲಿತವರದು ಕಲಿಯದವರದು, ವಿದ್ಯಾವಂತರದು–ಅವಿದ್ಯಾವಂತರದು (ಇಂಗ್ಲಿಷನ್ನು ತಿಳಿದವರು ಅದನ್ನು ತಿಳಿಯದವರು). ಈಗ ಇದು ಎರಡೂ ಸೇರಿ ಪಟ್ಟಣಿಗರು ಹಳ್ಳಿಗರು ಎಂಬ ಭೇದ ಬಂದಿದೆ. ಎಲ್ಲ ಹಕ್ಕುಗಳೂ ಎಲ್ಲ ಲಾಭವೂ ಈ ಆರ್ಥಿಕವೂ ವಿದ್ಯಾವಂತ ಪಟ್ಟಣಿಗರಿಗೆ; ಮತ್ತು ಎಲ್ಲ ದುಡಿತವೂ ಶ್ರಮಜೀವಿ ಅವಿದ್ಯಾವಂತ ಹಳ್ಳಿಜನರಿಗೆ. ಉತ್ತಮ ವಸ್ತು, ಭೋಗ ಭಾಗ್ಯಗಳೆಲ್ಲ ಮೊದಲಿನ ವರ್ಗದ ಪಾಲು. ಹಳ್ಳಿಗಳಿಗೂ ಕೂಡ ಈ ರೋಗ ವ್ಯಾಪಿಸಿ, ಭೂಮಿ ಇದ್ದವನು ಭೂಮಿಹೀನರಿಂದ ದುಡಿಸಿಕೊಂಡು, ಅವರಿಗೆ ಅರೆಹೊಟ್ಟೆಯ ಪಾಲು ಕೊಟ್ಟು ಕುದುರೆ ಮೇಲೆ ಸವಾರಿ ಮಾಡುತ್ತಿದ್ದ. ಈ ಬಗೆಯಾಗಿ, ಒಂದು ಆಳುವ ವರ್ಗ ಇನ್ನೊಂದು ಶೋಷಕವರ್ಗ ಆಯಿತು. ಪರಿಸ್ಥಿತಿ ಹೀಗೆ ಬಲು ಗಂಭೀರ ಆಗಿತ್ತು. ಒಂದು ಕಡೆ ಧನಿಕರ, ಭೂಮಾಲಿಕರ, ವಿದ್ಯಾವಂತರ. ಅಧಿಕಾರಿಗಳ ಕಾಟ. ಮಳೆ ಸುರಿಸದೆ, ಬೆಳೆ ಬೆಳೆಯದೆ ಪದೇ ಪದೇ ಬರವನ್ನು ತಂದಿಡುತ್ತಿದ್ದ ದೈವದ ಕಾಟ ಇನ್ನೊಂದು ಕಡೆ.

ಸರಕಾರವೂ ವಿದೇಶಿಗಳದು. ಅವರ ಚಾ ಸೆಕ ಬರೀ ನಖ ಇವರ ಬಣ್ಣ ಮಾಸಲು. ಅವರದು ಕೆಂಪು. ಈ ಕಪ್ಪು ತೊಗಲಿನ ಜನರ ಬೆನ್ನಿನ ಮೇಲೆ ಸವಾರಿ ಮಾಡಲೆಂದೇ ತಾವು ಹುಟ್ಟಿದ್ದೇವೆ ಎಂದು ಕೆಂಪು ಜನರ ಬ್ರಾಂತಿ . ತಾವು ಮಾಡಿದ್ದೆಲ್ಲವೂ ಇವರ ಯೋಗಕ್ಷೇಮಕ್ಕೇ ಎಂಬ ಭಾವ. ಇದು ತಮಗೆ ದೈವದತ್ತ ಕರ್ತವ್ಯ ಎಂಬ ಅಭಿಪ್ರಾಯ ಕೆಂಪು ಜನರಲ್ಲಿ ಜಳ ಬೇರೂರಿತ್ತು. ಅದಕ್ಕಾಗಿಯೇ ಭಾರತ ದೇಶ ಹೇಗೆ ದಾಸ್ಯಕ್ಕೆ ಗುರಿ ಆಯಿತೋ, ದಲ್ಲಾಳಿಗಳು ಆಗಿ ಬಂದ ಬ್ರಿಟಿಷರು ಹೇಗೆ ದರೋಡೆಕಾರರು ಆದರೋ , ನಮ್ಮ ರಾಜರಲ್ಲಿ ಇಬ್ಬರಲ್ಲಿ ಸ್ವಲ್ಪ ಜಗಳ ಪ್ರಾರಂಭ ಆಯಿತೋ, ಅವರ ನಡುವೆ ಪ್ರವೇಶ ಮಾಡಿ ಅಥವಾ ಜಗಳ ಹಚ್ಚಿ ನಡುವೆ ಬಿದ್ದು ಮೂರನೆಯವರಾದ ತಾವು ಹೇಗೆ ಅದರಲ್ಲಿ ಲಾಭ ಹಿರಿದುಕೊಂಡರೋ ಇದು ಎಲ್ಲವೂ ಇತಿಹಾಸದ ಮಾತು. ಈ ಇತಿಹಾಸ ಎಲ್ಲವೂ ಈಚೆಗೆ ಬಯಲಿಗೆ ಬಿತ್ತು. ಬ್ರಿಟಿಷರು ವರ್ಷ ವರ್ಷವೂ ಇಲ್ಲಿಂದ ಸಂಪತ್ತಿನ ಕಾಲುವೆ ಹರಿಯಿಸಿಕೊಂಡರೋ ತಮ್ಮ ದೇಶಕ್ಕೆ ಅವರು ಬಂದ ಮೇಲೆ ಹೇಗೆ ಕ್ಷಾಮ ಡಾಮರಗಳು ಹೆಚ್ಚಿದವೋ ದೇಶದಲ್ಲಿ ಇದನ್ನೆಲ್ಲ ವಿವರಿಸುವ ಗ್ರಂಥಗಳು ಹುಟ್ಟಿದವು. ಭಾರತದ ಬಡತನಕ್ಕೆ ಮೂಲ ಕಾರಣ ಏನೋ ಬ್ರಿಟಿಷ್ ಕಂಪನಿ ಅಮಾನುಷ ರೀತಿಯಲ್ಲಿ ಕ್ರೂರತನದಿಂದ ಹೇಗೆ ನಮ್ಮ ಕೈಗಾರಿಕೆಯನ್ನು ಕೊಂದಿತೋ ಎಲ್ಲವೂ ತಿಳಿದುಬಂತು.

ರಾಜಕೀಯ ಪ್ರಜ್ಞೆಯ ಹುಟ್ಟು

ಇದರಿಂದಾಗಿ ರಾಜಕೀಯ ಪ್ರಜ್ಞೆ ಜನರಲ್ಲಿ ಮೂಡತೊಡಗಿತು. ಈ ರಾಜಕೀಯ ಜಾಗೃತಿಯೇ ರಾಷ್ಟ್ರೀಯ ಮಹಾಸಭೆಗೆ –.ಕಾಂಗ್ರೆಸ್ಸಿಗೆ ಜನ್ಮಕೊಟ್ಟದ್ದು. ಭಾರತ ದೇಶದ ಪುನರುಜ್ಜೀವನಕ್ಕೆ ರಾಜಕೀಯ ಪ್ರಜ್ಞೆ ಒಂದೇ ಕಾರಣ ಆಗಲಿಲ್ಲ. ಧಾರ್ಮಿಕ, ಸಾಮಾಜಿಕ, ಶಿಕ್ಷಣದ ಕ್ಷೇತ್ರಗಳಲ್ಲಿ ಪುನರುತ್ಥಾನದ ಚಳವಳಿ ಮೊದಲೇ ರೂಪುಗೊಳ್ಳುತ್ತಿತ್ತು. ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ವಿವೇಕಾನಂದರ ಧಾರ್ಮಿಕ ಚಳವಳಿ ತಲೆಯೆತ್ತಿತ್ತು. ಭಾರತದ ಆತ್ಮವನ್ನು ಮತ್ತೆ ಚೇತನಗೊಳಿಸಬೇಕು ಎಂಬ ಚಳವಳಿ ಅದು. ಒಂದು ರಾಷ್ಟ್ರೀಯ ಸ್ವರೂಪ ಈ ಚಳವಳಿಗೆ ತಾನಾಗಿಯೆ ಬಂತು. ರಾಜಾ ರಾಮಮೋಹನ ರಾಯರು ಆಧುನಿಕ ಭಾರತದ ಜಾಗೃತಿಯ ಜನಕರು ಎನಿಸಿಕೊಂಡಿದ್ದಾರೆ. ಭಾರತದಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಪ್ರಾರಂಭ ಆಗಲು ಬೇರೆ ಕೆಲವು ಕಾರಣ ಇದ್ದರೂ ರಾಜಾರಾಮ ಮೋಹನರಾಯರ ಪ್ರಯತ್ನವೇ ಹೆಚ್ಚು ಪರಿಣಾಮಕಾರಿ ಕಾರಣ. ಈ ಪ್ರಯತ್ನದ ನಡುವೆಯೇ ಅವರು ಇಂಗ್ಲೆಂಡಿಗೆ ಹೋಗಿ ಅಲ್ಲಿ ವಾದ ಮಾಡಿ ಈ ದೃಷ್ಟಿಯನ್ನು ಮಂಡಿಸಿದರು. ರಾಜಾ ರಾಮಮೋಹನರಾಯರ ಕಾಲದಲ್ಲಿ ಬ್ರಹ್ಮ ಸಮಾಜ ಹುಟ್ಟಿತು. ಭಾರತದಲ್ಲಿ ಬಲವಾಗಿದ್ದ ಸಾಂಪ್ರದಾಯಿಕ ಶೃಂಖಲೆಗಳನ್ನು ಸಡಿಲಿಸಿ ಧರ್ಮವನ್ನು ವಿಶಾಲವಾದ ತಳಹದಿಯ ಮೇಲೆ ನಿಲ್ಲಿಸುವುದು ಅದರ ಉದ್ದೇಶ. ಮುಂದೆ ರಾಜಕೀಯದಲ್ಲಿ ಸ್ವತಂತ್ರ ವೃತ್ತಿಯನ್ನು ತೋರಿದ ಅನೇಕರು ಬ್ರಹ್ಮ ಸಮಾಜದವರು. ಗುರುದೇವ ಕವೀಂದ್ರ ರವಿಂದ್ರನಾಥ ಟ್ಯಾಗೋರ್ ಇಲ್ಲವೇ ಉದಾಹರಣೆಯಾಗಿ ರಾಮಮೋಹನರ ತರುವಾಯ ಬ್ರಹ್ಮ ಸಮಾಜದ ಮುಖಂಡತನ ಕೇಶವಚಂದಸೇನರಿಗೆ ಹೋಯಿತು. ಅವರ ಕಾಲದಲ್ಲಿ ಅವರಿಗೂ ಬ್ರಹ್ಮ ಸಮಾಜದ ಇತರ ಸದಸ್ಯರಿಗೂ ವಿವಾದ ಹುಟ್ಟಿ, ಸಮಾಜ ಇಬ್ಭಾಗ ಆಯಿತು. ಸಾಧಾರಣ ಬ್ರಹ್ಮ ಸಮಾಜ ಹುಟ್ಟಿಕೊಂಡಿತು. ಅದರ ಅಧ್ಯಕ್ಷರೇ ಮುಂದೆ ಒಂದು ಸಲ ಕಾಂಗ್ರೆಸ್ ಅಧ್ಯಕ್ಷರಾದರು.

ಕಾಂಗ್ರೆಸ್ ಉದಯ

ಹೀಗೆ ಎಲ್ಲ ದಿಕ್ಕಿನಿಂದಲೂ ಪುನರುಜ್ಜೀವನದ ಗಾಳಿ ಬೀಸುತ್ತಿರುವಾಗ, ಭಾರತದ ರಾಷ್ಟ್ರೀಯ ಮಹಾಸಭೆ (ಕಾಂಗ್ರೆಸ್) ಪ್ರಾರಂಭ ಆಯಿತು. ಹಲವು ಭಾರತ ಪ್ರೇಮಿ ಇಂಗ್ಲಿಷರೇ ಇದರ ಸ್ಥಾಪನೆಗೆ ಕಾರಣ. ಎ.ಓ.ಹ್ಯೂಂ ಒಂದು ರೀತಿಯಲ್ಲಿ ಕಾಂಗ್ರೆಸ್ಸಿನ ಜನ್ಮದಾತರು ಎಂದರೂ ಎನ್ನಬಹುದು. ಅವರ ಪ್ರಯತ್ನ ಸಫಲವಾಗಿ 1885ರಲ್ಲಿ ಮೊಟ್ಟಮೊದಲು ಬೊಂಬಾಯಿಯಲ್ಲಿ ಕಾಂಗ್ರೆಸ್ ಸೇರಿತು. ■



ಕರ್ನಾಟಕದ ಸರ್ದಾರ್ ಪಟೇಲ್

ಚೆನ್ನಬಸಪ್ಪ ಅಂಬಲಿ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿಯುಗ ಎಂಬುದು ಹೋರಾಟದ ಗತಿ ಬದಲಿಸಿದ ಸುವರ್ಣ ಕಾಲ. ರಾಷ್ಟಮಟ್ಟದಿಂದ ಹಿಡಿದು ಗ್ರಾಮೀಣ ಭಾಗದವರೆಗೂ ಹೋರಾಟಗಾರರನ್ನು ಬಡಿದೆಬ್ಬಿಸಿದ ಕಾಲ. ಮಹಾತ್ಮ ಗಾಂಧೀಜಿಯವರಿಂದ ಪ್ರೇರಣೆಗೊಂಡು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದ ಕೋಟ್ಯಾಂತರ ಜನರಲ್ಲಿ ಗ್ರಾಮೀಣ ಭಾಗದ ಎಲೆಮರೆಕಾಯಿಯಂಥ ಹೋರಾಟಗಾರರದ್ದೇ ಸಿಂಹಪಾಲು. ಅಂಥಹ ಪ್ರಮುಖರಲ್ಲಿ ಮುಂಚೂಣಿಯಲ್ಲಿರುವ ಹೆಸರೇ ಕರ್ನಾಟಕ ರಾಜ್ಯದ ವಿಜಯಪುರ ಜಿಲ್ಲೆಯ ಅರ್ಜುಣಗಿ ಗ್ರಾಮದ 'ಕರ್ನಾಟಕದ ಸರದಾರ್ ಪಟೇಲ್' ಎಂದೇ ಖ್ಯಾತರಾದ ಗಾಂಧಿವಾದಿ ಚೆನ್ನಬಸಪ್ಪ ಅಂಬಲಿಯವರು.

ಜನನ ಮತ್ತು ಬಾಲ್ಯ

ಚೆನ್ನಬಸಪ್ಪ ಅಂಬಲಿಯವರು ಈಗಿನ ವಿಜಯಪುರ ಜಿಲ್ಲೆ ಬಬಲೇಶ್ವರ ತಾಲೂಕಿನ ಜಮಖಂಡಿ-ವಿಜಯಪುರ ಹೆದ್ದಾರಿಯಲ್ಲಿ ಬರುವ ಅರ್ಜುಣಗಿ ಎಂಬ ಸಣ್ಣ ಹಳ್ಳಿಯಲ್ಲಿ 1895 ರ ಜನೇವರಿ 5 ರಂದು ಜನಿಸಿದರು. ತಂದೆ ಜಗದೇವಪ್ಪ ರೈತಾಪಿ ಕೆಲಸ ಮಾಡಿಕೊಂಡಿದ್ದರವರು. ಜಗದೇವಪ್ಪನವರು ಅಷ್ಟಾಗಿ ಓದಿಕೊಂಡಿಲ್ಲದ ಕಾರಣ ಮಗನ ಶಿಕ್ಷಣದ ಬಗ್ಗೆ ಹೆಚ್ಚು ಕಾಳಜಿ ವಹಿಸಲಿಲ್ಲ. ಬಾಲಕ ಚೆನ್ನಬಸಪ್ಪ ನಾಲ್ಕನೇ ತರಗತಿಯವರೆಗೆ ಮಾತ್ರ ಓದಿ ನಂತರ ಶಿಕ್ಷಣವನ್ನು ಮೊಟಕುಗೊಳಿಸಿ ತಂದೆಯ ಜೊತೆ ಕೃಷಿ ಮಾಡಲು ಆರಂಭಿಸಿದರು.


ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬರುವುದಕ್ಕೆ ಮುಂಚೆಯೆ ತಿಲಕರ ಪ್ರಭಾವ ಇವರ ಮೇಲಾಯಿತು. ವಿಜಯಪುರ ಮಹಾರಾಷ್ಟಕ್ಕೆ ಹೊಂದಿಕೊಂಡಿರುವುದರಿಂದ ಸಹಜವಾಗಿ ಚೆನ್ನಬಸಪ್ಪನವರಿಗೆ ತಿಲಕರ ಪ್ರಭಾವ ತುಸು ಹೆಚ್ಚೇ ಆಯಿತು. ಅವರ ಕೇಸರಿ ಮತ್ತು ಮರಾಠಾ ಪತ್ರಿಕೆಗಳ ಪ್ರಭಾವದಿಂದ ಇವರಲ್ಲಿ ರಾಷ್ಟ್ರೀಯತೆ ಜಾಗೃತವಾಗತೊಡಗಿತು. ಬ್ರಿಟಿಷರ ಶೋಷಣೆಯನ್ನು ಮನಗಂಡು ಜನರಲ್ಲಿ ಜಾಗೃತಿ ಕಾರ್ಯಗಳನ್ನು ಚುರುಕುಗೊಳಿಸಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಚೆನ್ನಬಸಪ್ಪನವರು

1914 ರಲ್ಲಿ ಬ್ರಿಟಿಷ ಮಾಮಲೆದಾರರು ಅರ್ಜುಣಗಿ ಗ್ರಾಮಕ್ಕೆ ಒಂದನೇ ಮಹಾಯುದ್ಧಕ್ಕೆ ದೇಣಿಗೆಯನ್ನು ಸಂಗ್ರಹಿಸಲು ಬಂದರು. ಅದನ್ನು ಬಹಿಷ್ಕರಿಸಿ ಪ್ರತಿಭಟಿಸಿದ ಚೆನ್ನಬಸಪ್ಪನವರು ಮೂರು ದಿನಗಳ ಕಾಲ ಉಪವಾಸ ಸತ್ಯಾಗ್ರಹವನ್ನು ಮಾಡಿದರು. ಇದರಿಂದ ಕೋಪಗೊಂಡ ಬ್ರಿಟಿಷ್ ಅಧಿಕಾರಿಗಳು ಇವರನ್ನು ಬಂಧಿಸಿ ಜೈಲಿಗೆ ಹಾಕಿದರು. ಈ ಜೈಲು ಶಿಕ್ಷೆ ಅನುಭವಿಸುವುದರೊಂದಿಗೆ ಅಂಬಲಿಯವರ ಸ್ವಾತಂತ್ರ್ಯ ಹೋರಾಟ ವಿದ್ಯುಕ್ತವಾಗಿ ಆರಂಭವಾಯಿತು.

ಒಂದನೇ ಮಹಾಯುದ್ಧದ ಮುಕ್ತಾಯ ಹೊತ್ತಿಗೆ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ್ದರು. ಅವರ ಅಹಿಂಸಾ ನೀತಿ ಮತ್ತು ಸತ್ಯಾಗ್ರಹಗಳಿಂದ ಪ್ರಭಾವಿತರಾದ ಅಂಬಲಿಯವರು ಅವರ ಅನುಯಾಯಿಯಾಗಿ ಅವರನ್ನು ಗುರುವಾಗಿ ಸ್ವೀಕರಿಸಿದರು.

ವಿಜಯಪುರದಲ್ಲಿ ಗಾಂಧಿ ಅನುಯಾಯಿಗಳ ಸಂಘವನ್ನು ಕಟ್ಟಿ ಬಡವರಿಂದ ಬ್ರಿಟಿಷರು ವಸೂಲಿ ಮಾಡುತ್ತಿದ್ದ ಭೂಕಂದಾಯ ವಸೂಲಿಯನ್ನು ವಿರೋಧಿಸಿದರು. ಕೇವಲ ಗ್ರಾಮೀಣ ಭಾಗಕ್ಕೆ ಸೀಮಿತರಾಗಿದ್ದ ಇವರನ್ನು ಸಂಪೂರ್ಣವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವಂತೆ ಮಾಡಿದ್ದು 1919 ರ ಜಲಿಯನ್ ವಾಲಾಬಾಗ್ ಹತ್ಯಾಕಾಂಡ.



ಜಲಿಯನ್ ವಾಲಾಬಾಗ್ ಹತ್ಯಾಕಾಂಡ ವಿರೋಧಿಸಿ ಪ್ರತಿಭಟಿಸಿ ಬ್ರಿಟಿಷರಿಮನದ ಬಂಧಿತರಾಗಿ ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದರು.

ಅನಂತರ ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗವಹಿಸಿ 1931 ರಲ್ಲಿ ವಿಜಯಪುರ ಮತ್ತು ವೀಸಾಪುರಗಳಲ್ಲಿ ಕಾರಾಗೃಹ ಶಿಕ್ಷೆ ಅನುಭವಿಸಿದರು. ಇವರ ಹೋರಾಟ ತೀವ್ರವಾದಾಗ ಬ್ರಿಟಿಷರು ತಲ್ಲಣಗೊಂಡರು. ಇವರ ಕುಟುಂಬಕ್ಕೆ ಕಿರುಕುಳ ನೀಡಲು ಆರಂಭಿಸಿದರು. ಸರ್ಕಾರದ ಕಿರುಕುಳ ಹೆಚ್ಚಾದಾಗ ಇವರು ವಿಜಯಪುರ ಬಿಟ್ಟು ಸಂಸಾರ ಸಮೇತ ಸೊಲ್ಲಾಪುರಕ್ಕೆ ವಾಸ್ತವ್ಯ ಬದಲಿಸಿದರು. ಅಲ್ಲಿ ಜೀವನ ನಡೆಸುವುದಕ್ಕಾಗಿ ನೌಕರಿ ಹಿಡಿದರೂ ಕೂಡ ಹೋರಾಟವನ್ನು ಮುಂದುವರೆಸಿದರು. ಮತ್ತೆ ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗಿಯಾಗಿ ಬ್ರಿಟಿಷರ ನಿದ್ದೆಗೆಡಿಸಿದರು. ಇವರ ಕಾಟ ತಾಳಲಾರದೆ ಸರ್ಕಾರವು ಇವರ ಮೇಲೆ ಲಷ್ಕರಿ ಕಾನೂನನ್ನು ಹೇರಿತು. ಇದರಿಂದ ಕುಟುಂಬಕ್ಕೆ ಕಿರುಕುಳ ಮತ್ತೆ ಹೆಚ್ಚಾಯಿತು. ಕುಟುಂಬವನ್ನು ಪುನಃ ಸೊಲ್ಲಾಪುರಕ್ಕೆ ಸ್ಥಳಾಂತರಿಸಿದರು.

ದೇಶಸೇವೆಗಾಗಿ ಎಂಥಹ ತ್ಯಾಗಕ್ಕೂ ಚೆನ್ನಬಸಪ್ಪನವರು ಮತ್ತವರ ಕುಟುಂಬ ತಯಾರಿತ್ತು ಎಂಬುದಕ್ಕೆ ಒಂದು ಸಣ್ಣ ಉದಾಹರಣೆ ಹೀಗಿದೆ. ಒಂದು ಸಾರಿ ಕಾಯ್ದೆ ಭಂಗ ಚಳುವಳಿಯ ಕರಪತ್ರಗಳನ್ನು ಮುದ್ರಿಸಲು ಅವರ ಬಳಿ ಹಣ ಇರಲಿಲ್ಲ. ಹಣ ಸಾಲದಾದಾಗ ಹೊಸದಾಗಿ ಮದುವೆಯಾಗಿ ಮನೆಗೆ ಬಂದ ಅವರ ಅತ್ತಿಗೆಯ 100 ಗ್ರಾಂ (ಹತ್ತು ತೊಲ) ಚಿನ್ನದ ಒಡವೆಯನ್ನು ಕೇಳಿ ಪಡೆದರು. ನಿಸ್ವಾರ್ಥ ಮನಸ್ಸಿನವರಾಗಿದ್ದ ಸಾಧ್ವಿಯಾದ ಚೆನ್ನಬಸಪ್ಪನವವರ ಅತ್ತಿಗೆ ಮರುಯೋಚಿಸದೆಯೇ ನೀಡಿದ್ದರು.

1930–33 ರ ಅವಧಿಯಲ್ಲಿ ಕಾಯ್ದೆ ಭಂಗ ಚಳುವಳಿಯಲ್ಲಿ ಬಹು ಮುಖ್ಯ ಪಾತ್ರವಹಿಸಿ ಬ್ರಿಟಿಷ್ ಸರ್ಕಾರಕ್ಕೆ ತೀವ್ರ ಮುಜುಗುರ ಉಂಟು ಮಾಡಿದ್ದಕ್ಕಾಗಿ ಚೆನ್ನಬಸಪ್ಪ ಅವರಿಗೆ ಕಠಿಣ ಕಾರಾಗೃಹ ಶಿಕ್ಷೆಗೆ ಒಳಪಡಿಸಿ ಸೆರೆಮನೆಗೆ ಕಳುಹಿಸಲಾಯಿತು. ಜೈಲಿನಲ್ಲಿದ್ದುಕೊಂಡು ಹಿಂದಿ ಮತ್ತು ಮರಾಠಿ ಭಾಷೆಗಳನ್ನು ಕಲಿತರು.

ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ರಾಜಕೀಯದಲ್ಲೂ ಒಲವು ಬೆಳೆಸಿಕೊಂಡು 1940 ರಲ್ಲಿ ಕೆ.ಪಿ.ಸಿ.ಸಿ ಕಾರ್ಯದರ್ಶಿಯಾಗಿ ಹುಬ್ಬಳ್ಳಿ–ಧಾರವಾಡಕ್ಕೆ ನಿವಾಸ ಬದಲಿಸಿದರು. 1942 ರಲ್ಲಿ ಕಾಂಗ್ರೆಸ್ಸಿನ ಕಾರ್ಯಕರ್ತರಾಗಿ, ಕ್ವಿಟ್ ಇಂಡಿಯಾ ಸಮಿತಿಯ ಅಧ್ಯಕ್ಷರಾಗಿ ಚಳುವಳಿಯಲ್ಲಿ ಸಕ್ರಿಯವಾಗಿ ದುಡಿದರು. ಟಪಾಲು ಲೂಟಿ ಮಾಡುವುದು, ಸರ್ಕಾರಿ ಮಹತ್ವದ ಕಾಗದಪತ್ರಗಳನ್ನು ಸುಡುವುದು ಮುಂತಾದ ವಿಧ್ವಂಸಕ ಕೃತ್ಯಗಳನ್ನು ಕೈಗೊಂಡರು. ಇವರ ನೇತೃತ್ವದಲ್ಲಿ ಮಿಂಚನಾಳ ಮತ್ತು ಜುಮನಾಳ ರೈಲು ನಿಲ್ದಾಣಗಳು ಅಗ್ನಿಗೆ ಆಹುತಿಯಾದವು. ಮುಂಬಯಿಯಿಂದ ಇಂಗ್ಲೆಂಡಿಗೆ ಬಂಗಾರ, ಸಾಮಾನು – ಸರಂಜಾಮು ತುಂಬಿಕೊಂಡು ಹೊರಟ ಹಡಗೊಂದರ ಜಲಸಮಾದಿ ಮಾಡಿದ ಕೀರ್ತಿ ಇವರದು. ಆ ಕಾಲದಲ್ಲಿ ಇವರನ್ನು ಹಿಡಿದುಕೊಟ್ಟವರೆ ರೂ.5,000 ಬಹುಮಾನ ಕೊಡುವುದಾಗಿ ಬ್ರಿಟಿಷ್ ಸರ್ಕಾರ ಘೋಷಿಸಿತು. ಆದರೂ ಭಯಪಡದೇ ಕ್ವಿಟ್ ಇಂಡಿಯಾ ಚಳುವಳಿಯನ್ನು ಯಶಸ್ವಿಗೊಳಿಸಿದರು. ಸ್ವಾತಂತ್ರ್ಯ ಸಿಗುವವರೆಗೂ ಗಾಂಧಿವಾದದಲ್ಲಿ ನಂಬಿಕೆಯಿಟ್ಟು ಚಳುವಳಿಗಳನ್ನು ರೂಪಿಸಿದರು.

ರಾಜಕೀಯ ಜೀವನದಲ್ಲಿ ಸೋಲಿಲ್ಲದ ಸರದಾರ

ಕಾಂಗ್ರೆಸ್ಸಿನ ಸಕ್ರಿಯ ನಾಯಕರಾಗಿದ್ದ ಇವರು 1955ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಆಯ್ಕೆಯಾದರು. ತಿಕೋಟಾ ವಿಧಾನಸಭಾ ಕ್ಷೇತ್ರ (ಈಗಿನ ಬಬಲೇಶ್ವರ ವಿಧಾನಸಭಾ ಕ್ಷೇತ್ರ) ದಿಂದ 1952 ಮತ್ತು 1957ರಲ್ಲಿ ಎರಡು ಬಾರಿ ವಿಧಾನ ಸಭಾ ಸದಸ್ಯರಾಗಿ ಆಯ್ಕೆ ಹೊಂದಿದರು. ಕರ್ನಾಟಕ ಏಕೀಕರಣಕ್ಕಾಗಿ ಮತ್ತು ಅಸ್ಪೃಶ್ಯತಾ ನಿವಾರಣೆಗಾಗಿ ದುಡಿದರು. ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಬೇಕೆಂಬುದು ಇವರ ಹಠವಾಗಿತ್ತು.

ಅಂಬಲಿ ಚೆನ್ನಬಸಪ್ಪನವರು ತಿಕೋಟಾ ತಾಲ್ಲೂಕಿನಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿ ರಾಜಕೀಯ ಜೀವನ ಆರಂಭಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ 1957 ರ ರಾಜ್ಯ ಚುನಾವಣೆಯಲ್ಲಿ ಬಸವರಾಜ ನಾದೂರರನ್ನು ಸೋಲಿಸಿ ಶಾಸಕರಾಗಿ ಆಯ್ಕೆಯಾದರು. ಮರಾಠಿ ಭಾಷೆಯ ಮಧ್ಯೆ ಮರೆಯಾಗಿದ್ದ ಕನ್ನಡ ಮತ್ತು ಕನ್ನಡ ನಾಡನ್ನು ಒಂದಾಗಿಸಲು

ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ರಾಜಕೀಯದಲ್ಲೂ ಒಲವು ಬೆಳೆಸಿಕೊಂಡು 1940 ರಲ್ಲಿ ಕೆ.ಪಿ.ಸಿ.ಸಿ ಕಾರ್ಯದರ್ಶಿಯಾಗಿ ಹುಬ್ಬಳ್ಳಿ–ಧಾರವಾಡಕ್ಕೆ ನಿವಾಸ ಬದಲಿಸಿದರು. 1942 ರಲ್ಲಿ ಕಾಂಗ್ರೆಸ್ಸಿನ ಕಾರ್ಯಕರ್ತರಾಗಿ, ಕ್ವಿಟ್ ಇಂಡಿಯಾ ಸಮಿತಿಯ ಅಧ್ಯಕ್ಷರಾಗಿ ಚಳುವಳಿಯಲ್ಲಿ ಸಕ್ರಿಯವಾಗಿ ದುಡಿದರು.

ಶ್ರಮವಹಿಸಿದ ಚೆನ್ನಬಸಪ್ಪನವರು ಕರ್ನಾಟಕದ ಸರ್ದಾರ್ ಪಟೇಲರೆಂದೇ ಬಿಜಾಪುರದಲ್ಲಿ ಖ್ಯಾತರಾದರು. ಇವರು ಎಸ್ ಆರ್ ಕಂಠಿ, ಮುರಿಗೆಪ್ಪ ಸುಗಂಧಿ, ಬಸಪ್ಪ ದಾನಪ್ಪ ಜತ್ತಿ ಮುಂತಾದ ನಾಯಕರ ಒಡನಾಡಿಯಾಗಿದ್ದರು.

ಎಂಭತ್ತರ ಆಸುಪಾಸಿನಲ್ಲಿದ್ದ ಚೆನ್ನಬಸಪ್ಪನವರು ರಾಜ್ಯದಲ್ಲಿ ಯುವ ನೇತಾರರನ್ನು ಬೆಳೆಸುವಲ್ಲಿ ಆಸಕ್ತಿ ವಹಿಸಿದರು. ಆದ ಕಾರಣ 1962ರ ಚುನಾವಣೆಯಲ್ಲಿ ತಾವು ಸ್ಪರ್ಧಿಸುವ ಕ್ಷೇತ್ರವಾದ ತಿಕೋಟಾವನ್ನು ತಮ್ಮ ಬದಲಿಗೆ ಬಿ ಎಂ ಪಾಟೀಲರಿಗೆ (ಮಾಜಿ ಜಲಸಂಪನ್ಮೂಲ ಸಚಿವರಾದ ಎಮ್.ಬಿ.ಪಾಟೀಲ್ ಅವರ ತಂದೆ) ಬಿಟ್ಟುಕೊಟ್ಟರು.

ನಿಧನ

ತಮ್ಮ ಜೀವನವನ್ನೇ ಭಾರತದ ಸ್ವಾತಂತ್ರ್ಯಕ್ಕಾಗಿ ಮತ್ತು ಕರ್ನಾಟಕದ ಏಕೀಕರಣಕ್ಕಾಗಿ ಮುಡಿಪಿಟ್ಟ ಚೆನ್ನಬಸಪ್ಪನವರು ಪಾರ್ಶ್ವವಾಯು ಪೀಡಿತರಾಗಿ ಮಾರ್ಚ್ 1, 1962 ರಂದು ಕೈಲಾಸವಾಸಿಗಳಾದರು.

ಪ್ರಚಲಿತದಲ್ಲಿರುವ ಕೆಲವೇ ಕೆಲವು ಹೆಸರುಗಳನ್ನು ವಿಜೃಂಭಿಸಿ ದೇಶಕ್ಕಾಗಿ, ನಾಡಿಗಾಗಿ, ಭಾಷೆಗಾಗಿ, ಇನ್ನೊಬ್ಬರಿಗೆ ಬುನಾದಿ ಹಾಕಿ ನಿಸ್ವಾರ್ಥತೆಯನ್ನು ಮೆರೆದ ಚೆನ್ನಬಸಪ್ಪನಂಥವರನ್ನು ನೆನೆಯದಿದ್ದರೆ ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲದಂತಾಗುತ್ತದೆ..

–ರವಿಚಂದ್ರ ಜಗಣ್ಣವರ್

ಪ್ರಚಾರ ಪಡೆಯದ ಗಾಂಧೀಜಿ ಸಾಧನೆಗಳು

ಕರಾರು ಕೂಲಿ ಪದ್ಧತಿಯಲ್ಲಿ, ಬಡ ನಿರುದ್ಯೋಗಿ ಭಾರತೀಯರನ್ನು ದೂರ ದೂರದ ಬ್ರಿಟಿಷ್ ವಸಾಹತುಗಳಿಗೆ ಅಗ್ಗದ ಕೂಲಿಗಾಗಿ ಸಾಗಿಸಲಾಗುತ್ತಿತ್ತು. ಈ ದೋಷಪೂರಿತ ಪದ್ಧತಿಯನ್ನು ತೊಡೆದುಹಾಕಿದ್ದು ಗಾಂಧೀಜಿಯವರ ಅತ್ಯಂತ ಪ್ರಮುಖವಾದ ಆದರೆ ಹೆಚ್ಚು ಪ್ರಚಾರವಿಲ್ಲದೆ ಸಾಧನೆ.

ಕರಾರುಕೂಲಿ ಭಾರತೀಯರು ಯಾವ ಶೋಚನೀಯ ಪರಿಸ್ಥಿತಿಯಲ್ಲಿ ಬದುಕಿದ್ದು ದುಡಿಯುತ್ತಿದ್ದರೋ ಅದನ್ನು ಗಾಂಧೀ ಮೊದಲು ಕಂಡದ್ದು ದಕ್ಷಿಣ ಆಫ್ರಿಕಾದಲ್ಲಿ. ಅಲ್ಲದೇ ಅವರಿಗೆ ಮತದಾನದ ಹಕ್ಕು ಇರಲಿಲ್ಲ. ಪಾದಚಾರಿ ಪಥಗಳಲ್ಲಿ ಓಡಾಡುವಂತಿರಲಿಲ್ಲ. ರಾತ್ರಿ ಒಂಭತ್ತರ ನಂತರ ಅವರು ಅಪ್ಪಣೆ ಇಲ್ಲದೆ ಹೊರಗೆಲ್ಲೂ ಹೋಗುವಂತಿರಲಿಲ್ಲ ಮತ್ತು ಮೂರು ಪೌಂಡ್ ತಲೆಗಂದಾಯ ಕಟ್ಟಬೇಕಾಗಿತ್ತು.

ಇದನ್ನೆಲ್ಲಾ ಅರಿತ ಗಾಂಧೀಜಿ ಅವರಿಗಾಗಿ ನೆಟಾಲ್ ಭಾರತೀಯ ಕಾಂಗ್ರೆಸ್ ಸ್ಥಾಪಿಸಿದರು. (1894) ಫಿನಿಕ್ಸ್ ಮತ್ತು ಟಾಲ್ಸ್ ಟಾಯ್ ಆಶ್ರಮಗಳನ್ನು ಕಟ್ಟಿದರು. (1903 ಮತ್ತು 1910). 'ಇಂಡಿಯನ್ ಓಪಿನಿಯನ್' ಪತ್ರಿಕೆ ಹೊರಡಿಸಿದರು. (1903) ಮತ್ತು ಸತ್ಯಾಗ್ರಹ ತಂತ್ರವನ್ನು ರೂಪಿಸಿದರು. (1906) ಅದರಿಂದ ಅವರು ನೆಟಾಲ್ ಮತ್ತು ಟ್ರಾನ್ಸ್ವಾಲ್ ಸರ್ಕಾರಗಳಿಂದ ಕ್ರಮವಾಗಿ 1907 ಮತ್ತು 1914 ರಲ್ಲಿ ಅಲ್ಲಿನ ಭಾರತೀಯರಿಗೆ ಅನುಕೂಲವಾದ ಸಾಕಷ್ಟು ಸುಧಾರಣೆಗಳನ್ನು ಗಳಿಸಿದರು.

1896 ರಲ್ಲಿ ಗಾಂಧೀಜಿ ಭಾರತಕ್ಕೆ ಬಂದಿದ್ದಾಗ ಭಾಷಣಗಳ ಮೂಲಕ ಹಾಗೂ ತಾವು ಬರೆದಿದ್ದ "ಹಸಿರು ಕರಪತ್ರಗಳ" ಮೂಲಕ ದಕ್ಷಿಣ ಆಫ್ರಿಕಾದ ಭಾರತೀಯರ ಸಂಕಷ್ಟಗಳನ್ನು ಪ್ರಕಟಪಡಿಸಿದರು. ಇದರ ಬಗ್ಗೆ ರಾಯಿಟರ್ಸ್ನ ಒಂದು ವರದಿ ದಕ್ಷಿಣ ಆಫ್ರಿಕಕ್ಕೆ ತಲುಪಿ, ಭಾರಿ ಅಲ್ಲೋಲ ಕಲ್ಲೋಲ ಉಂಟುಮಾಡಿತು. ಗಾಂಧೀಯವರು ಸಂಸಾರ ಸಮೇತ ಡರ್ಬಾನ್ನಲ್ಲಿ ಇಳಿದಾಗ, ಬಿಳಿಯರ ದಂಡೊಂದು ಅವರ ಮೇಲೆ ಬಿದ್ದು ದೊಡ್ಡ ಹಲ್ಲೆ ಮಾಡಿತು. ಆಗ ಸ್ಥಳಿಯ ಪೊಲೀಸ್ ಅಧಿಕಾರಿಯ ಹೆಂಡತಿ ಅವರನ್ನು ಕಾಪಾಡಿದರು. ಇಲ್ಲವಾದರೆ ಗಾಂಧಿಯವರನ್ನು ಅಂದೇ ಆ ಉದ್ವಿಗ್ನ ಗುಂಪು ಕೊಂದೇ ಬಿಡುತ್ತಿತ್ತು .

1901 ರಲ್ಲಿ ಗಾಂಧೀಯವರು ಮಾರಿಷಸ್ ನಲ್ಲಿ ಭಾರತೀಯರ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಅಲ್ಲಿಗೆ ಹೋದರು. 1912 ರಲ್ಲಿ ಫಿಜಿಯ ಭಾರತೀಯರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಗಾಂಧೀಯವರ ಸಹಾಯ ಕೋರಿದರು. ಆಗ ಅವರು ಮಣಿಲಾಲ ಡಾಕ್ಟರನ್ನು ಅಲ್ಲಿಗೆ ಹೋಗಲು ಹೇಳಿದರು ಮತ್ತು ತಾವು ಮಾರಿಷಸ್ ನಲ್ಲಿ ತಂಗಿದರು. ಈ ರೀತಿ ಗಾಂಧೀಜಿಯವರ ಪ್ರಯತ್ನದಿಂದಾಗಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಮಿತಿಯು ಕರಾರುಕೂಲಿ ಪದ್ಧತಿಯ ಕಾರ್ಮಿಕರ ಬಗ್ಗೆ ಗಮನ ಹರಿಸುವಂತಾಯಿತು. 1915 ರ ಅಧಿವೇಶನದಲ್ಲಿ ಕರಾರುಕೂಲಿ ಪದ್ಧತಿ ರದ್ದತಿಗೆ ಕರೆ ನೀಡಿತು.

1915 ರಲ್ಲಿ ಗಾಂಧೀಜಿ ಭಾರತಕ್ಕೆ ಹಿಂದಿರುಗಿದ ನಂತರ, ಅವರು ಚಾರ್ಲಿ ಆಂಡ್ರೂಸ್ಗೆ ಫಿಜಿಗೆ ಹೋಗಿ ಅಲ್ಲಿನ ಭಾರತೀಯರ ಸ್ಥಿತಿಗತಿ ಬಗ್ಗೆ ವರದಿ ಮಾಡಬೇಕೆಂದು ಹೇಳಿದರು. ಆಂಡ್ರೂಸರ ವರದಿ ತುಂಬಾ ಖಾರವಾಗಿತ್ತು. ಇದನ್ನರಿತ ಗಾಂಧೀಜಿಯವರು ಜನವರಿ 1917 ರಲ್ಲಿ ಕಲಕತ್ತೆಯ ಕಾಂಗ್ರೆಸ್ ನಲ್ಲಿ ಒಂದು ನಿರ್ಣಯವನ್ನು ಮಾಡಿದರು. "ಕರಾರು ಕೂಲಿ ಎಂದು ಹೆಸರು ಕೊಡಲಿ, ಅಥವಾ ಬೇರಾವ ಹೆಸರನ್ನಾದರೂ ಕೊಡಲಿ, ಆ ಪದ್ಧತಿಯನ್ನು ಸಂಪೂರ್ಣ ತೊಡೆದುಹಾಕದ ಹೊರತು ಕೂಲಿಕಾರರಿಗೆ ಸರಿಪಡಿಸಲಾಗದಂಥ ಹಾನಿಮಾಡಿರುವ ಆತಂಕಕಾರಿ ಪದ್ಧತಿ ಎಂದೇ ಎಲ್ಲರೂ ಒಪ್ಪಿರುವ ಆ ಪದ್ಧತಿಯ ಕೆಡಕುಗಳನ್ನು ತಡೆಯಲಾಗುವುದಿಲ್ಲ". ಹಾಗೆ ರದ್ದು ಮಾಡದಿದ್ದರೆ ಸಾಮೂಹಿಕವಾಗಿ ಅಹಿಂಸಾತ್ಮಕ ಶಾಸನಭಂಗ ಚಳುವಳಿಯನ್ನು ಆರಂಭಿಸುವುದಾಗಿ ಗಾಂಧಿ ಘೋಷಿಸಿದರು. 1917 ಮಾರ್ಚ್ 20 ರಂದು ವೈಸರಾಯ್ ಲಾರ್ಡ್ ಹಾರ್ಡಿಂಜರು ಕರಾರುಕೂಲಿ ಪದ್ಧತಿಯು ಕೊನೆಗೊಳ್ಳುತ್ತದೆ ಎಂದು ಪ್ರಕಟಿಸಿದರು. ಆದರೂ ಅದೇ ವರ್ಷ ಜೂನ್ ತಿಂಗಳಲ್ಲಿ ವಸಾಹತು ಕಚೇರಿ ಹೊಸದೊಂದು ಯೋಜನೆಯನ್ನು ಪ್ರಕಟಿಸಿತು. ಅದರ ಹೆಸರು "ಇಸ್ಲಿಂಗ್ಟನ್" ಸಹಾಯಕ ವಲಸೆ ಯೋಜನೆ. ಗಾಂಧಿ ಇದನ್ನೂ ಬಲವಾಗಿ ವಿರೋಧಿಸಿದರು. "ಇದೊಂದು ಹೊಸ ಬಗೆಯ ಕರಾರು ಕೂಲಿ ಪದ್ಧತಿ, ಕೂಲಿಗಳ ಹಿತದ್ದಲ್ಲ, ವಸಾಹತು ಮಾಲೀಕನ ಹಿತದ್ದು" ಎಂದರು. ಕಾಂಗ್ರೆಸ್ಸು ಇದನ್ನು ಅನುಮೋದಿಸಿತು.1919 ಜನವರಿಯಲ್ಲಿ ಆ ಯೋಜನೆಯನ್ನು ಕೈ ಬಿಡಲು ವೈಸರಾಯ್ ಸೂಚಿಸಿದರು. ಅದನ್ನು ಕೈ ಬಿಡಲಾಯಿತು.


ಬ್ರಿಸ್ಲೇ ಸಮರೂ "ಮಹಾತ್ಮರ ಕೆರಿಬಿಯನ್ ಆಸಕ್ತಿಗಳು" **(mahatma's Caribbean concern)** ಎಂಬ ಪಾಂಡಿತ್ಯ ಪೂರ್ಣ ಲೇಖನದಲ್ಲಿ ಹೇಳುತ್ತಾರೆ, ' ಸೂರ್ಯ ಎಂದಿಗೂ ಮುಳುಗದೆ ಇದ್ದ ಸಾಮ್ರಾಜ್ಯದ ' ವಿರುದ್ಧ ಶಾಂತಿಯುತ ಸಂಗ್ರಾಮದಲ್ಲಿ ಗಾಂಧಿ ತೊಡಗಿದ್ದರೂ, ನಡುನಡುವಿನ ಸಮಯದಲ್ಲಿ, ನೆಟಾಲ್, ಮಾರಿಷಸ್, ಫಿಜಿ ಮತ್ತು ಕೆರಿಬಿಯನ್ ತೋಟಗಳಲ್ಲಿ ದುಡಿಯುತ್ತಿದ್ದ ಹಾಗೂ ತಾತ್ಕಾಲಿಕವಾಗಿ ನಷ್ಟವೇ ಆಗಿ ಹೋಗಿದ್ದ ಕಾರ್ಮಿಕ ಪೀಳಿಗೆಗಳಿಗೂ ಗಮನವೀಯಲು ಸಮಯ ಮಾಡಿಕೊಳ್ಳುತ್ತಿದ್ದರು. ಉದಾಹರಣೆಗಳಿಂದ, ಸಲಹೆ ಹಾಗೂ ಅವರ ಪರ ಹೋರಾಟಗಳಿಂದ ಅವರು ಆ ಜನರಿಗೆ ದನಿ ನೀಡಿದರು ಹಾಗೂ ಅವರಲ್ಲಿ ಹೊಸ ಆಸೆ ಕೊನರಿಸಿದರು. ಆ ಜನ ಭಾರತದಿಂದ ಸಾಗಿಸಲ್ಪಟ್ಟ ಮೇಲೆ ಮತ್ತು ತೋಟದ ಕೆಲಸದ ಕಷ್ಟಗಳನ್ನು ಅನುಭವಿಸಿದ ಮೇಲೆ ಜರ್ಜರಿತರಾಗಿದ್ದರು. ಅವರ ಪುನರುಜ್ಜೀವನಕ್ಕೆ ಗಾಂಧೀಜಿ ಕಾರಣರಾದರು. ಆದ್ದರಿಂದ ವೈವಿಧ್ಯಮಯ...ಭಾರತೀಯರು ಅವರನ್ನೇ ತಮ್ಮದೇ ಮಹಾತ್ಮರನ್ನಾಗಿ ಮಾಡಿಕೊಂಡರು.

1837 ರಿಂದ 1917 ರ ಅವಧಿಯಲ್ಲಿ ಕರಾರುಕೂಲಿ ಪದ್ಧತಿ ಚಾಲ್ತಿಯಲ್ಲಿದ್ದಾಗ, ಭಾರತದಿಂದ 11,94,957 ಭಾರತೀಯರನ್ನು 14 ದೂರದೂರದ ಬ್ರಿಟಿಷ್ ವಸಾಹತುಗಳಿಗೆ ಸಾಗಿಸಲಾಯಿತು ಎಂಬುದನ್ನು ನೆನಸಿ ಕೊಳ್ಳುವುದು ಸಂಗತ. ಆ ಪೈಕಿ ಅತಿ ಹೆಚ್ಚು ಸಂಖ್ಯೆಯಲ್ಲಿ ಸಾಗಿಸಿದ್ದು ಮಾರಿಷಸ್ (4,53,063), ಬ್ರಿಟಿಷ್ ಗಯಾನಾಗೆ (2,38,909), ನೆಟಾಲ್ ಗೆ (1,52,184) ಹಾಗೂ ಫಿಜಿಗೆ (60,965).

ಸೌಜನ್ಯ : ಅಮೋಘ ನಾಯಕ ಗಾಂಧಿ ಕೃತಿ


ಗಾಂಧಿ ಕುತೂಹಲ ಸಂಗತಿ...

ಮಹಾರಾಷ್ಟ್ರದ ವಾರ್ಧಾ- ಸೇವಾಗ್ರಾಮ ಆಶ್ರಮಕ್ಕೆ ಕುಷ್ಠರೋಗ ಪೀಡಿತರಾಗಿದ್ದ (ಸಂಸ್ಕೃತ ಸ್ಕಾಲರ್) ಪರ್ಚೂರೆ ಶಾಸ್ತ್ರೀಗಳನ್ನು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಕರೆತಂದು ಪ್ರತಿದಿನ ತಾವೇ ಸ್ವತಃ 15 ರಿಂದ 20 ನಿಮಿಷಗಳ ವರೆಗೆ ಪರ್ಚೂರೆ ಅವರ ಗಾಯಗಳನ್ನು ತೊಳೆದು ಮುಲಾಮು ಹಚ್ಚಿ ಶುಶ್ರೂಷೆ ಮಾಡುತ್ತಿದ್ದರು. ಆಶ್ರಮದಲ್ಲಿ ಈಗಲೂ ಪರ್ಚೂರೆ ಕುಟಿಯನ್ನು ಕಾಣಬಹುದು & 1940ನೇ ಇಸ್ವಿ ಜನವರಿ ತಿಂಗಳಲ್ಲಿ ತೆಗೆದ ಭಾವಚಿತ್ರಗಳಿವು..



ಸಂಗ್ರಹ : ನೇತಾಜಿ ಗಾಂಧಿ

ಮಕ್ಕಳಿಗಾಗಿ ಗಾಂಧಿ ಕತೆ



ಸ್ವಾವಲಂಭಿ ಗಾಂಧಿ

ಗಾಂಧೀಜಿಯವರು ಅನ್ ಟು ದ ಲಾಸ್ಟ್ ಪುಸ್ತಕದಿಂದ ಪ್ರಭಾವಿತರಾದ ಕತೆಯನ್ನು ನೀವೆಲ್ಲರೂ ಕೇಳಿದ್ದೀರಲ್ಲವೆ? ಅವರು ಎಲ್ಲ ಶ್ರಮಿಕರ ಕೆಲಸವನ್ನೂ ವಿಶೇಷವಾಗಿ ಗೌರವಿಸುತ್ತಿದ್ದರು ಮತ್ತು ಎಲ್ಲ ಕೆಲಸಗಳನ್ನು ಸಮಾನ ಗೌರವದಿಂದ ನೋಡುತ್ತಿದ್ದರು.

ಒಮ್ಮೆ ಗಾಂಧೀಜಿ ಮತ್ತು ಲಾಲಾ ಲಜಪತ್ ರಾಯ್ ಅವರು ಸ್ವಾತಂತ್ರ್ಯ ಹೋರಾಟದ ಕಾರ್ಯಕ್ರಮದ ಪ್ರಯುಕ್ತ ಗೆಳೆಯರಾದ ಶಿವಪ್ರಕಾಶ ಗುಪ್ತ ಅವರ ಮನೆಯಲ್ಲಿ ತಂಗಿದ್ದರು. ಬೆಳಿಗ್ಗೆ ಮೊದಲು ಸ್ನಾನ ಮಾಡಿದ ಲಜಪತರಾಯರು ತಮ್ಮ ಬಟ್ಟೆಗಳನ್ನು ಸ್ನಾನದ ಮನೆಯಲ್ಲಿಯೇ ಬಿಟ್ಟು ಹೊಸಬಟ್ಟೆ ಧರಿಸಿ ಕಾರ್ಯಕ್ರಮಕ್ಕೆ ಹೊರಟರು. ಸಂಜೆ ಬಂದು ನೋಡುವಾಗ ಅವರ ಬಟ್ಟೆ ಸ್ವಚ್ಛವಾಗಿ ಅವರ ಹಾಸಿಗೆಯ ಮೇಲೆ ಒಪ್ಪವಾಗಿತ್ತು. ಅವರು ಗುಪ್ತಾ ಅವರ ಮನೆಯ ಆಳುಗಳು ಬಟ್ಟೆಯನ್ನು ಒಗೆದಿರಬಹುದು ಎಂದು ಭಾವಿಸಿದರು. ಹೀಗೆಯೇ ಒಂದು ವಾರ ಕಳೆದು ಅವರ ಮನೆಯಿಂದ ಹೊರಡಬೇಕು ಎನ್ನುವಾಗ ತನ್ನ ಬಟ್ಟೆಯನ್ನು ಇಷ್ಟು ದಿನವೂ ಒಗೆದು, ಒಣಗಿಸಿ, ಮಡಚಿಟ್ಟ ಕೆಲಸದಾಳಿಗೆ ಏನಾದರೂ ನೀಡಬೇಕೆಂದು ಗುಪ್ತಾರಲ್ಲಿ ವಿಚಾರಿಸಿದರು. ಮನೆಯ ಆಳುಗಳಲ್ಲಿ ಕೇಳಲಾಗಿ ಯಾರೂ ಕೂಡ ತಾವು ಬಟ್ಟೆಯನ್ನು ಒಗೆದಿಲ್ಲ ಎಂದರು. ಕೊನೆಗೆ ಒಬ್ಬ ಆಳು ಹೇಳಿದ ಅವರ ಜತೆಗೆ ಬಂದ ಇನ್ನೊಬ್ಬರಿದ್ದಾರಲ್ಲ, ಅವರೇ ಬಟ್ಟೆಗಳನ್ನು ಒಣಗಿಸುತ್ತಿದ್ದುದನ್ನು ತಾನು ನೋಡಿರುವೆನೆಂದು. ಅವರು ಗಾಂಧೀಜಿಯವರಾಗಿದ್ದರು ಎಂಬುದು ನಿಮಗೆ ಅರ್ಥವಾಗಿರಬೇಕಲ್ಲವೆ?

ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕು ಎಂಬುದು ಗಾಂಧೀಜಿಯವರ ತತ್ವವಾಗಿತ್ತು.

ಸಂಗ್ರಹ : ಸುಧಾ ಅಡುಕುಳ

ದೀಪದಾರಿ ಗಾಂಧಿ..



ಮೋಹನ ದಾಸರಿಂದ ಮಹಾತ್ಮರವರೆಗೆ. ಅದು 79 ವರುಷದ ಸುದೀರ್ಘ ಪಯಣ. ಅದೇನು ಒಂದಿನ ಅಥವಾ ಎರಡು ದಿನದಲ್ಲಿ ಆದ ಬದಲಾವಣೆಯಲ್ಲ.

ಮೋಹನ್ ದಾಸ್ ಅನ್ನುವ ಬ್ಯಾರಿಸ್ಟರ್,

' ಮಹಾತ್ಮ' ನಾದುದು ಒಂದೇ ದಿನದಲ್ಲಿ ಅಲ್ಲ,

ಅಲ್ಲಿ ಸಂಘರ್ಷದ ಹೋರಾಟವಿದೆ , ಸಂಕಟಮಯ ಬದುಕಿದೆ, ಅಲ್ಲಿ ಆತನಿಗಾದ ಅವಮಾನ ಅಪಮಾನಗಳಿಗೆ ಲೆಕ್ಕವೇ ಇಲ್ಲ,ಆದರೂ ಅವೆಲ್ಲವೂಗಳನ್ನು ಸಹಿಸಿಕೊಂಡು,ಸಾವರಿಸಿಕೊಂಡು, ಸರ್ವರ ಅಭ್ಯುದಯಕ್ಕಾಗಿ ಗಂಧದ ಕೊರಡಿನಂತೆ ಸವೆಯುತ್ತ, ಪ್ರತಿದಿನ ಪ್ರತಿಕ್ಷಣ ಬದಲಾಗುತ್ತ, ಜಗತ್ತಿಗೆ ತೆರೆದುಕೊಳ್ಳುತ್ತ, ತಮ್ಮ ಬದುಕನ್ನೇ ಒಂದು ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡು ಮಾನವ ಪ್ರಪಂಚಕ್ಕೆ ದೀಪದಾರಿಯಾದವರು ರಾಷ್ಟ್ರಪಿತ ಗಾಂಧಿ.

ಸಂಗ್ರಹ : ನೇತಾಜಿ ಗಾಂಧಿ



ಜೆ ಸಿ ಕುಮಾರಪ್ಪ
ದೇಸಿ ಆರ್ಥಿಕ ತಜ್ಞ

ವಾರ್ಧಾ ಬಳಿಯ ಸೇವಾಗ್ರಾಮದಲ್ಲಿ ಇಂದಿಗೂ ಸಹ ಅಲ್ಲಿನ ಪ್ರತಿ ದಿನದ ಚಟುವಟಿಗಳು ಪ್ರಾರ್ಥನೆಯಾದ ನಂತರ, ಜೆ.ಸಿ. ಕುಮಾರಪ್ಪ ವಾಸವಾಗಿದ್ದ ಕುಟೀರದ ಬಳಿ ನಮನ ಸಲ್ಲಿಸುವುದರೊಂದಿಗೆ, ಅಲ್ಲಿರುವ ಗ್ರಾಮೀಣ ವಿಜ್ಞಾನ ಕೇಂದ್ರದಲ್ಲಿ ಕಾರ್ಯಗಳು ಆರಂಭಗೊಳ್ಳುತ್ತವೆ. ಜಗತ್ತು ಈಗಾಗಲೆ ಭಾರತವೂ ಸೇರಿದಂತೆ ಆಧುನಿಕ ಜಗತ್ತು ಗುರುತಿಸಿರುವ ಗಾಂಧಿ ಅರ್ಥಶಾಸ್ತ್ರವನ್ನು ಪ್ರಯೋಗ ಮತ್ತು ಫಲಿತಾಂಶಗಳ ಮೂಲಕ ಜಾರಿಗೆ ತಂದವರು ಜೆ.ಸಿ. ಕುಮಾರಪ್ಪ.

ಗಾಂಧೀಜಿ ಅಮೂರ್ತವಾಗಿ ಏನೇನು ಕನಸಿದ್ದರೊ, ಅವೆಲ್ಲವನ್ನು ಸಾಕಾರಗೊಳಿಸಿದ ಕುಮಾರಪ್ಪ, ಗಾಂಧೀಜಿಯವರ ಚಿಂತನೆಗಳಿಗೆ ಮೂರ್ತ ಸ್ವರೂಪ ನೀಡುವುದರ ಮೂಲಕ ಅರ್ಥಶಾಸ್ತ್ರಕ್ಕೆ ಹೊಸ ವ್ಯಾಖ್ಯಾನ ನೀಡಿದರು. ಗ್ರಾಮಭಾರತ ಕುರಿತಂತೆ, ಕೈಗಾರಿಕೆಗಳ ವಿಕೇಂದ್ರೀಕರಣ, ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿ, ಪರಿಸರಕ್ಕ ಧಕ್ಕೆಯಾಗದಂತೆ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಹಾಗೂ ಶ್ರಮ ವಿಭಜನೆ ಹೀಗೆ ತಮ್ಮ ಪ್ರತಿಭೆ ಮತ್ತು ಚಿಂತನೆಯನ್ನು ಧಾರೆಯೆರೆದ ಜೆ.ಸಿ. ಕುಮಾರಪ್ಪನವರು, ದೈನಂದಿನ ಬದುಕಿನ ಲೌಕಿಕ ವ್ಯವಹಾರಕ್ಕೆ ಆಧ್ಯಾತ್ಮದ ಸ್ಪರ್ಶ ನೀಡಿ, ಶಾಶ್ವತ ಅರ್ಥಶಾಸ್ತ್ರ ಮತ್ತು ನಶ್ವರ ಅರ್ಥಶಾಸ್ತ್ರ ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕುವುದರ ಮೂಲಕ ಗಾಂಧಿ ಅರ್ಥಶಾಸ್ತ್ರ ಎಂಬ ಜ್ಞಾನ ಶಾಖೆಯೊಂದನ್ನು ಅಸ್ತಿತ್ವಕ್ಕೆ ತಂದರು.

ಮೂಲತಃ ಕ್ರೈಸ್ತ ಧರ್ಮಕ್ಕೆ ಸೇರಿದ ಕುಮಾರಪ್ಪನವರ ಪೂರ್ಣ ಹೆಸರು ಜೋಸೆಫ್ ಕಾರ್ನೆಲಿಯಸ್ ಎಂದು. ತಮಿಳುನಾಡಿನ ತಂಜಾವೂರಿನಲ್ಲಿ 4-1-1892 ರಲ್ಲಿ ಜನಸಿದ ಕುಮಾರಪ್ಪನವರ ಪೂರ್ವಿಕರು ಮೂಲತಃ ಹಿಂದುಗಳಾಗಿದ್ದು, ಬ್ರಿಟೀಷರ ಆಳ್ವಿಕೆಯಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದರು. ಇಂಗ್ಲೇಂಡ್ ಮತ್ತು ಅಮೇರಿಕಾದಲ್ಲಿ ಸಾರ್ವಜನಿಕ ಹಣಕಾಸು ಮತ್ತು ಲೆಕ್ಕ ಪರಿಶೋಧಕ ವಿಷಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಗಳಿಸಿದ್ದ ಕುಮಾರಪ್ಪ, ಅಂದಿನ ಬಾಂಬೆ ನಗರದಲ್ಲಿ ಬ್ರಿಟೀಷ್ ಸಂಸ್ಥೆಯೊಂದರಲ್ಲಿ ಲೆಕ್ಕ ಪರಿಶೋಧಕನಾಗಿ ವೃತ್ತಿ ಆರಂಭಿಸಿ, ನಂತರ ತಮ್ಮದೆ ಸ್ವಂತ ಸಂಸ್ಥೆಯನ್ನು ಹುಟ್ಟು ಹಾಕಿದ್ದರು. ಎಂದೂ ಹಣದ ಮೇಲೆ ಮೋಹ ಬೆಳಸಿಕೊಳ್ಳದ ಕುಮಾರಪ್ಪ, " ಮನುಷ್ಯನಿಗೆ ಹಣ ಸಂಪಾದನೆ ಮುಖ್ಯವಲ್ಲ, ರಾಜಕೀಯವಾಗಿ, ಸಾಮಾಜಿಕವಾಗಿ, ಶುದ್ಧಚಾರಿತ್ರ್ಯ ಕಾಪಾಡಿಕೊಂಡು, ಆಧ್ಯಾತ್ಮಕವಾಗಿಯೂ ಕೂಡ ಮನುಷ್ಯ ನೆಮ್ಮದಿ ಪಡೆಯಬಹುದು" ಎಂದು ಪ್ರತಿ ಪಾದಿಸುತ್ತಿದ್ದರು. ಜೊತೆಗೆ " ಎಂದೂ ತಪ್ಪು ಮಾಡಬೇಡಿ, ನೀವು ಮಾಡುವ ತಪ್ಪಿಗೆ ಮತ್ತೊಬ್ಬರು ನರಳುತ್ತಾರೆ" ಎಂದೂ ಸದಾ ಎಚ್ಚರಿಸುತ್ತಿದ್ದರು, ಜೊತೆಗೆ ಇಂತಹ ನೈತಿಕ ಪ್ರಜ್ಞೆಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಕುಮಾರಪ್ಪನವರ ಇಂತಹ ಶಿಸ್ತಿನ ಜೀವನ ಮತ್ತು ವಿಚಾರಧಾರೆ, ಅಂತಿಮವಾಗಿ ಅವರನ್ನು ಗಾಂಧೀಜಿಯವರತ್ತ ಕೊಂಡೊಯ್ದು ನಿಲ್ಲಿಸಿತು.

ಕುಮಾರಪ್ಪನವರ ಆರ್ಥಿಕ ಶಿಸ್ತು, ಮತ್ತು ಆಧ್ಯಾತ್ಮಕ ಒಲವು ಇವುಗಳ ಹಿಂದೆ ಅವರ ಹೆತ್ತ ತಾಯಿಯವರ ಪ್ರಭಾವ ದಟ್ಟವಾಗಿದೆ. ಅವರ ತಂದೆ ಎಸ್.ಡಿ. ಕಾರ್ಲೆನಿಯಸ್ ಭಾರತೀಯ ರೈಲ್ವೆಯಲ್ಲಿ ಉದ್ಯೋಗಿಯಾಗಿದ್ದರಿಂದ ಅವರದು ಮಧ್ಯಮವರ್ಗದ ಕುಟುಂಬವಾಗಿತ್ತು. ಕುಮಾರಪ್ಪನವರ ತಾಯಿ ಎಸ್ತರ್ ರಾಜನಾಯಕನ್ ತಮ್ಮ ಗೃಹ ಕೃತ್ಯದ ಜೊತೆಗೆ ಪೇಟೆಗೆ ಹೋಗಿ ಕೋಳಿ ಮತ್ತು ಮೊಟ್ಟೆಗಳನ್ನು ತಂದು ತಮ್ಮ ಬಡಾವಣೆಯಲ್ಲಿ ಮಾರಾಟ ಮಾಡುತ್ತಿದ್ದರು. ಇದರ ಲೆಕ್ಕಾಚಾರ ಬರೆದಿಡುವ ಜವಾಬ್ದಾರಿ ಬಾಲಕ ಕುಮಾರಪ್ಪನವರ ಮೇಲಿತ್ತು. ಪ್ರತಿ ತಿಂಗಳು ಕೋಳಿಗಳು ಮತ್ತು ಮೊಟ್ಟೆಗಳಿಗೆ ವಿನಿಯೋಗಿಸಿದ ಬಂಡವಾಳ, ಹಾಗೂ ಅವುಗಳ ಮಾರಾಟದಿಂದ ಬಂದ ಲಾಭ ಇವೆಲ್ಲನ್ನೂ ಕರಾರುವಕ್ಕಾಗಿ ಕುಮಾರಪ್ಪ ಲೆಕ್ಕ ಬರೆದು ತಾಯಿಗೆ ಒಪ್ಪಿಸುತ್ತಿದ್ದರು. ವರ್ಷದ ಕೊನೆಯಲ್ಲಿ ಬಂದ ಲಾಭದಲ್ಲಿ

ಶೇಕಡ ಇಪ್ಪತ್ತೈದು ಭಾಗವನ್ನು ಅವರ ತಾಯಿ ಕ್ರಿಸ್ ಮಸ್ ಹಬ್ಬದ ಸಮಯದಲ್ಲಿ ಬಡವರಿಗೆ ದಾನದ ರೂಪದಲ್ಲಿ ನೀಡುತ್ತಿದ್ದರು. ಹೀಗೆ ಬಾಲ್ಯದಲ್ಲಿ ತಾಯಿಯಿಂದ ಕಲಿತ ಲೆಕ್ಕಾಚಾರ ಮತ್ತು ಧಾನ ಧರ್ಮದಂತಹ ಆಚಾರ, ವಿಚಾರ, ಶಿಸ್ತು ಇವೆಲ್ಲವೂ ಕುಮಾರಪ್ಪನವರ ಬದುಕಿನುದ್ದಕ್ಕೂ ಅವರನ್ನು ಆವರಿಸಿಕೊಂಡವು.

1913 ರಲ್ಲಿ ಲಂಡನ್ ನಗರಕ್ಕೆ ತೆರಳಿ, ಲೆಕ್ಕ ಪರಿಶೋಧಕನಾಗಿ ತರಬೇತಿ ಮತ್ತು ಪದವಿಯನ್ನು ಪಡೆದು , 1919 ರಲ್ಲಿ ಭಾರತಕ್ಕೆ ವಾಪಸ್ ಬಂದ ಕುಮಾರಪ್ಪ, ಅವರ ತಂದೆ ತಾಯಿಯ ಸಲಹೆಯಂತೆ ಬಾಂಬೆ ನಗರದಲ್ಲಿ ನೆಲೆ ನಿಂತು. ಬ್ರಿಟೀಷ್ ಲೆಕ್ಕ ಪರಿಶೋಧನಾ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದರು. ಈ ಸಂದರ್ಭದಲ್ಲಿ ಬ್ರಿಟೀಷ್ ಸರ್ಕಾರ ಬಾರತದ ಜನಸಾಮಾನ್ಯರು ಮತ್ತು ವರ್ತಕರನ್ನು ತೆರಿಗೆ ರೂಪದಲ್ಲಿ ಸುಲಿಯುತ್ತಿರುವ ಸಂಗತಿ ಅವರ ಗಮನಕ್ಕೆ ಬಂದಿತು. 1924 ರಲ್ಲಿ ಬ್ರಿಟೀಷ್ ಸಂಸ್ಥೆಯ ಉದ್ಯೋಗ ತೊರೆದು " ಕಾರ್ಲೆನಿಯಸ್ ಅಂಡ್ ದೇವರ್" ಎಂಬ ಹೆಸರಿನಲ್ಲಿ ಸ್ವಂತ ಸಂಸ್ಥೆಯನ್ನು ಆರಂಭಿಸಿ, ಆರ್ಥಿಕ ಮತ್ತು ತೆರಿಗೆ ಸಲಹೆಗಾರರಾಗಿ ವೃತ್ತಿ ಜೀವನ ಆರಂಭಿಸಿದರು.

1927 ರಲ್ಲಿ ಸಾರ್ವಜನಿಕ ಹಣಕಾಸು ವಿಭಾಗದಲ್ಲಿ

ಸ್ನಾತಕೋತ್ತರ ಪದವಿ ಮಾಡುವ ಉದ್ದೇಶದಿಂದ ಅಮೇರಿಕಾದ ಕೊಲಂಬಿಯ ವಿಶ್ವವಿದ್ಯಾನಿಲಯಕ್ಕೆ ತೆರಳಿದರು. ಅಲ್ಲಿನ ಸ್ಥಳೀಯ ಚರ್ಚ್ ಒಂದರಲ್ಲಿ ಕುಮಾರಪ್ಪ ನೀಡಿದ್ದ" ಭಾರತದ ಬಡತನ " ಕುರಿತ ಉಪನ್ಯಾಸದ ವರದಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ವರದಿಯಾಗಿ ಪ್ರಕಟವಾಗಿತ್ತು. ಇದು ಅವರ ಗುರುಗಳಾದ ಡಾ.ಸಲಿಗ್ಮನ್ ಅವರ ಗಮನಕ್ಕೆ ಬಂತು. ತಮ್ಮ ಶಿಷ್ಯನ ಪ್ರತಿಭೆಯನ್ನು ಗಮನಿಸಿದ ಸಲಿಗ್ ಮನ್, ಎಂ.ಎ, ಪದವಿಯಲ್ಲಿ "ಭಾರತದ ಬಡತನ ಮತ್ತು ಸಾರ್ವಜನಿಕ ಹಣಕಾಸು" ವಿಷಯ ಕುರಿತು ಪ್ರಬಂಧ ಬರೆಯಲು ಸೂಚಿಸಿದರು. ಈ ಕುರಿತು ಅಧ್ಯಯನ ಆರಂಭಿಸಿದ ಕುಮಾರಪ್ಪನವರಿಗೆ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸುಲಿಗೆಯ ವೈಖರಿಯ ಇತಿಹಾಸ ಅವರೆದುರು ಅನಾವರಣಗೊಂಡಿತ್ತು. ಈ ಸಂದರ್ಭದಲ್ಲಿ ಬ್ರಿಟೀಷ್ ಸರ್ಕಾರದ ವಿರುದ್ಧ ಅವರೆಷ್ಟು ಕ್ರೋಧಗೊಂಡಿದ್ದರೆಂದರೆ, ತಮ್ಮ ಮೂಲ ಹೆಸರಾದ ಜೋಸೆಫ್ ಕಾರ್ಲೆನಿಯಸ್ ಹೆಸರಿನ ಮುಂದೆ ಮತ್ತೆ ತಮ್ಮ ಪೂರ್ವಿಕರ ಹೆಸರಾದ ಹಿಂದೂ ಧರ್ಮದ ಕುಮಾರಪ್ಪ ಎಂಬ ಹೆಸರನ್ನು ಸೇರಿಸಿಕೊಂಡರು. 1929 ರಲ್ಲಿ ಭಾರತಕ್ಕೆ ಹಿಂತಿರುಗಿ ಬಂದ ಕುಮಾರಪ್ಪ, ಸಿ. ಹೆಚ್. ಸಫಾರಿವಾಲ ಎಂಬುವರ ಸಲಹೆ ಮೇರೆಗೆ ಗಾಂಧೀಜಿಯನ್ನು ಬೇಟಿ ಮಾಡಿದರು. ಆ ವೇಳೆಗಾಗಲೆ ಮದನ್ ಮೋಹನ್ ಮಾಳವೀಯ ಮುಖಾಂತರ ಕುಮಾರಪ್ಪನವರ ಬರಹಗಳನ್ನು ಓದಿದ್ದ ಗಾಂಧೀಜಿ, ತನ್ನಂತೆ ಭಾರತದ ಹಳ್ಳಿಗಳ ಬಗ್ಗೆ ಚಿಂತಿಸುತ್ತಿರುವ ವಿದ್ಯಾವಂತ ಯುವಕ ಕುಮಾರಪ್ಪನವರ ಬಗ್ಗೆ ತೀವ್ರ ಆಸಕ್ತಿ ಹೊಂದಿದ್ದರು.

1929 ರ ಕೊನೆಯ ದಿನಗಳಲ್ಲಿ ಬಾಂಬೆಯಿಂದ ಅಹಮದಾಬಾದ್ಗೆ ತೆರಳಿದ ಕುಮಾರಪ್ಪ, ಸಬರಮತಿ ಆಶ್ರಮದಲ್ಲಿ ಗಾಂಧೀಜಿಯನ್ನು ಬೇಟಿ ಮಾಡಿದರು. ಆವರೆಗೆ ಕೇವಲ ಪತ್ರಿಕೆಗಳಲ್ಲಿ ಪ್ರಕಟವಾಗುವ ಚಿತ್ರಗಳಲ್ಲಿ ಮಾತ್ರ ಗಾಂಧಿಯನ್ನು ನೋಡಿದ್ದ ಕುಮಾರಪ್ಪ, ಮೊದಲ ಬಾರಿಗೆ ಅವರನ್ನು ನೋಡಿದಾಗ, ಸ್ವಲ್ಪ ಕಾಲ ಗೊಂದಲವುಂಟಾಯಿತು. ಸಬರಮತಿ ಆಶ್ರಮದ ತಮ್ಮ ನಿವಾಸದ ಎದುರುಗಿನ ಬೇವಿನ ಮರದ ನೆರಳಿನಲ್ಲಿ ಸಗಣಿಯಿಂದ ಸಾರಿಸದ್ದ ನೆಲದ ಮೇಲೆ ಕುಳಿತ ಓರ್ವ ವೃದ್ಧ ಚರಕದಿಂದ ನೂಲು ನೇಯುತ್ತಿರುವುದನ್ನು ಕಂಡು ಹತ್ತಿರಕ್ಕೆ ಹೋದಾಗ, ಅವರು ಗಾಂಧಿಯೊ? ಅಲ್ಲವೊ? ಎಂಬ ಅನುಮಾನವುಂಟಾಯಿತು. ಕುಮಾರಪ್ಪ ನೇರವಾಗಿ ಅವರನ್ನೇ ಕೇಳಿದರು. ನೀವು ಮೋಹನ ದಾಸ್ ಕರಮಚಂದ ಗಾಂಧಿ ತಾನೆ? ಹಲ್ಲಿಲ್ಲದ ತಮ್ಮ ಬೊಚ್ಚುಬಾಯಿಯಲ್ಲಿ ಮುಖದ ತುಂಬಾ ನಗು ತಂದುಕೊಂಡ ಗಾಂಧೀಜಿ " ಹೌದು ನಾನೇ ಆ ಗಾಂಧಿ" ಎಂದು ಕುಮಾರಪ್ಪನವರಿಗೆ ಉತ್ತರಿಸಿದ್ದರು. ಸೂಟು ಬೂಟು ಧರಿಸಿ ಹೋಗಿದ್ದ ಕುಮಾರಪ್ಪನವರಿಗೆ ಕೂರಲು ಕುರ್ಚಿಯೊಂದನ್ನು ತರಿಸಿದಾಗ, ಅದರ ಮೇಲೆ ಗಾಂಧೀಜಿ ಎದುರು ಕೂರಲು ನಿರಾಕರಿಸಿದ ಕುಮಾರಪ್ಪ ಕಷ್ಟ ಪಟ್ಟು ನೆಲದ ಮೇಲೆ ಕುಳಿತರು.

ಕುಮಾರಪ್ಪನವರ ಪ್ರಬಂಧ ಹಾಗೂ ಲೇಖನಗಳ ಕುರಿತು ಮೆಚ್ಚುಗೆಯ ಮಾತನಾಡಿದ ಗಾಂಧೀಜಿ, ತಾವು ಸಂಪಾದಿಸುತ್ತಿದ್ದ ಯಂಗ್ ಇಂಡಿಯ ಮತ್ತು ಹರಿಜನ ಪತ್ರಿಕೆಗಳಿಗೆ ಲೇಖನ ಬರೆಯುವಂತೆ ಕುಮಾರಪ್ಪನವರನ್ನು ಆಹ್ವಾನಿಸಿದರು. ಅಲ್ಲದೆ, ಗುಡಿ ಕೈಗಾರಿಕೆ, ಮತ್ತು ಸ್ಥಳೀಯ ದೇಶಿ ತಂತ್ರಜ್ಞಾನ ಅಭಿವೃದ್ಧಿ ಸಾಧ್ಯತೆಗಳ ಬಗ್ಗೆ ಗುಜರಾತಿನ ಖೇಡ್ ಜಿಲ್ಲೆಯ ಮಾಟಾರ್ ತಾಲ್ಲೂಕಿನ ಅಧ್ಯಯನ ನಡೆಸುವಂತೆ ವಿನಂತಿಸಿಕೊಂಡರು. ಗಾಂಧೀಜಿ ಅಣತಿಯಂತೆ ಕುಮಾರಪ್ಪ ಅಧ್ಯಯನ ಮುಗಿಸಿ ಬರುವದರೊಳಗೆ, ಮಹಾತ್ಮ ತಮ್ಮ ಉಪ್ಪಿನ ಸತ್ಯಾಗ್ರಹದ ಅಂಗವಾಗಿ ಕಾಲ್ನಡಿಗೆಯಲ್ಲಿ ಅಹಮದಾಬಾದಿನಿಂದ 240 ಕಿಲೋಮೀಟರ್

ದೂರದ ಸೂರತ್ ಸಮೀಪದ ದಂಡಿಗೆ ಪ್ರಯಾಣ ಆರಂಭಿಸಿದ್ದರು. ಒಮ್ಮೆ ಮಾರ್ಗ ಮಧ್ಯೆ ಗಾಂಧೀಜಿಯನ್ನು ಬೇಟಿ ಮಾಡಿದಾಗ, ಕುಮಾರಪ್ಪನವರಿಗೆ ಗಾಂಧೀಜಿ ಮತ್ತೊಂದು ಜವಾಬ್ದಾರಿ ವಹಿಸಿದರು. ಯಾವುದೇ ಸಂದರ್ಭದಲ್ಲಿ ತಾನು ಮತ್ತು ಮಹದೇವ ದೇಸಾಯಿ (ಗಾಂಧಿಯವರ ಆಪ್ತ ಕಾರ್ಯದರ್ಶಿ) ಬ್ರಿಟೀಷ್ ಸರ್ಕಾರದಿಂದ ಬಂಧನಕ್ಕೊಳಗಾಗುವ ಸಾಧ್ಯತೆ ಇದ್ದು, ನಾವು ಬಂಧಿಸಲ್ಪಟ್ಟರೆ, ಯಂಗ್ ಇಂಡಿಯ ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿ ವಹಿಸಿಕೊಳ್ಳಬೇಕೆಂದು ಗಾಂಧೀಜಿ ವಿನಂತಿಸಿಕೊಂಡರು. ಅವರ ನಿರೀಕ್ಷೆಯಂತೆ ಉಪ್ಪಿನ ಸತ್ಯಾಗ್ರಹ ವೇಳೆಯಲ್ಲಿ ಗಾಂಧೀಜಿ ಬಂಧಿಸಲ್ಪಟ್ಟಾಗ, ಯಂಗ್ ಇಂಡಿಯಾ ಪತ್ರಿಕೆಯ ಸಂಪಾದಕನಾಗಿ ಹೊಣೆ ಹೊತ್ತ ಕುಮಾರಪ್ಪ, ಬ್ರಿಟೀಷ್ ಸರ್ಕಾರದ ವಿರುದ್ಧ ಪತ್ರಿಕೆಯಲ್ಲಿ ಲೇಖನ ಬರೆದರು. ಅದರ ಪರಿಣಾಮವಾಗಿ ಅವರೂ ಸಹ ಬಂಧನಕ್ಕೊಳಗಾಗಿ ಒಂದೂವರೆ ವರ್ಷ ಜೈಲು ಶಿಕ್ಷೆ ಅನುಭವಿಸಿದರು. ಆನಂತರ ಮತ್ತೊಮ್ಮೆ ಇಂತಹದ್ದೇ ಕೃತ್ಯವೆಸಗಿ ಮತ್ತೆ ಒಂದು ವರ್ಷ ಜೈಲು ಶಿಕ್ಷೆಗೆ ಗುರಿಯಾದರು.

ತಮ್ಮ ಬದುಕು ತೆಗೆದು ಕೊಂಡ ಅನಿರೀಕ್ಷಿತ ತಿರುವುಗಳ ಫಲವಾಗಿ ಕುಮಾರಪ್ಪನವರಿಗೆ ಸರಮನೆಯ ವಾಸದ ಅವಧಿಯಲ್ಲಿ ಅವರ ಬದುಕಿನ ಅಲೋಚನಾ ಕ್ರಮ ಬದಲಾವಣೆಗೊಂಡಿತು. ಭಾರತವನ್ನು ಬ್ರಿಟೀಷರಿಂದ ಬಿಡುಗಡೆ ಮಾಡುವುದರ ಜೊತೆ ಜೊತೆಗೆ ಇಲ್ಲಿನ ಜನರನ್ನು ಬಡತನದಿಂದ ಮತ್ತು ಸಂಕಟಗಳಿಂದ

ಮುಕ್ತಿ ಗೊಳಿಸಬೇಕೆಂಬ ಛಲ ಉಂಟಾಯಿತು. ಈ ಛಲ ಅವರನ್ನು ಭಾರತದ ಗ್ರಾಮೀಣಾಭಿವೃದ್ಧಿ ಮತ್ತು ನಮ್ಮ ಪೂರ್ವಿಕರ ದೇಶಿಯ ಜ್ಞಾನ ಶಿಸ್ತುಗಳನ್ನು ಪುನರ್ ರೂಪಿಸಲು ಪ್ರೇರಣೆಗೊಳಿಸಿತು. ಭಾರತದ ಹಳ್ಳಿಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ, ನಾವು ಹಳ್ಳಿಗಳಲ್ಲಿ ವಾಸಮಾಡಿದಾಗ ಮಾತ್ರ, ಗ್ರಾಮಭಾರತದ ನಾಡಿ ಮಿಡಿತ ಅರಿಯಲು ಸಾಧ್ಯ ಎಂಬ ತೀರ್ಮಾನಕ್ಕೆ ಬಂದರು. ಇದೇ ಸಮಯಕ್ಕೆ ಸರಿಯಾಗಿ, 1934 ರಲ್ಲಿ ಬಿಹಾರದಲ್ಲಿ ಸಂಭವಿಸಿದ ಭೂಕಂಪದ ಪರಿಣಾಮ ನೆಲಸಮವಾದ ಹಳ್ಳಿಗಳ ಪುನರುಜ್ಜೀವನ ಮತ್ತು ಸಂತ್ರಸ್ತರ ಪುನರ್ವಸತಿ ಕಾರ್ಯ ಈ ಎರಡು ಜವಾಬ್ದಾರಿಗಳು ಕುಮಾರಪ್ಪನವರ ಹೆಗಲೇರಿದವು. ಗಾಂಧೀಜಿಯವರು ಭೂಕಂಪದ ಸಂತಸ್ತರಿಗಾಗಿ ದೇಶಾದ್ಯಂತ ಸಂಗ್ರಹಿಸಿದ್ದ ಪರಿಹಾರದ ಹಣವನ್ನು ಕುಮಾರಪ್ಪನವರ ಕೈಗಿತ್ತು, ನೂರಾರು ಕಾರ್ಯಕರ್ತರ ಪಡೆಯೊಂದನ್ನು ಅವರ ಜೊತೆ ಬಿಹಾರಕ್ಕೆ ಕಳಿಸಿಕೊಟ್ಟರು.

ಕುಮಾರಪ್ಪನವರ ಆರ್ಥಿಕ ಶಿಸ್ತು ಮತ್ತು ಹಣಕಾಸು ನಿರ್ವಹಣೆಯಲ್ಲಿ ಅವರಿಗಿದ್ದ ಬದ್ಧತೆ ಇವೆಲ್ಲವನ್ನೂ ಸ್ವತಃ ಗಾಂಧೀಜಿ ಕಣ್ಣಾರೆ ಕಂಡು, ಅನುಭವಿಸಿ ಮೆಚ್ಚುಗೆ ಸೂಚಿಸಿದರು. ಪರಿಹಾರದ ಹಣದಲ್ಲಿ ಪ್ರತಿ ಕಾರ್ಯಕರ್ತನಿಗೆ ಊಟಕ್ಕಾಗಿ ಪ್ರತಿ ದಿನ ಮೂರಾಣೆ (ಹದಿನೆಂಟು ಪೈಸೆ) ಖರ್ಚು ಮಾಡುತ್ತಿದ್ದ ಕುಮಾರಪ್ಪ, ತಾವು ಕೂಡ ಅಷ್ಟೇ ಹಣದಲ್ಲಿ ಬಿಹಾರದಲ್ಲಿ ಬದುಕತೊಡಗಿದರು. ಗಾಂಧೀಜಿ ಬಿಹಾರಕ್ಕೆ ಬೇಟಿ ನೀಡಲು ಬಂದಾಗ, ಮಹಾದೇವ ದೇಸಾಯಿ ಅವರಿಗೆ ಮುಂಚಿತವಾಗಿ ಕಾಗದ ಬರೆದ ಕುಮಾರಪ್ಪನವರು, ' ನಿಮಗೆ ಮತ್ತು ಬಾಪು ಇಬ್ಬರಿಗೂ ಬಿಹಾರ ಪ್ರವಾಸದ ಸಮಯದಲ್ಲಿ ದಿನಕ್ಕೆ ಮೂರಾಣೆಯಂತೆ ಖರ್ಚು ಮಾಡಲು ಸಾಧ್ಯ, ನಿಮ್ಮ ಮೋಟಾರು ವಾಹನದ ಪೆಟ್ರೋಲು, ಇತರೆ ಖರ್ಚುಗಳನ್ನು ನೀವು ವೈಯಕ್ತಿವಾಗಿ ಭರಿಸಬೇಕು" ಎಂದು ತಿಳಿಸಿದರು. ಕುಮಾರಪ್ಪನವರ ಮಾತಿಗೆ ತಲೆ ಬಾಗಿದ ಗಾಂಧೀಜಿ ಇತರೆ ಖರ್ಚುಗಳನ್ನು ಸ್ವಂತವಾಗಿ ಭರಿಸಿದರು. ಅಲ್ಲದೆ, ಕುಮಾರಪ್ಪನವರ ಶಿಸ್ತು ಬದ್ಧತೆಗಳನ್ನು ಮೆಚ್ಚಿ ಅವರಿಗೆ "ಕಾಲೋನಿಯಲ್ ಸಾಹೇಬ್" ಎಂಬ ತಮಾಷೆಯ ಬಿರುದನ್ನು ಕೊಟ್ಟು ಹೋದರು.

ಕುಮಾರಪ್ಪನವರಿಗೆ ಇದ್ದ ಆಳವಾದ ಒಳನೋಟ ಮತ್ತು ಅಭಿವೃದ್ಧಿ ಬಗೆಗಿನ ಕಲ್ಪನೆ ಇವುಗಳನ್ನು ಗಮನಿಸಿದ ಗಾಂಧೀಜಿ, ತನ್ನ ಸಹೋದರನ ಪುತ್ರ ಸ್ಥಾಪಿಸಿದ್ದ ಗ್ರಾಮೀಣ ವಿಜ್ಞಾನ ಕೇಂದ್ರ ಜವಬ್ದಾರಿ ವಹಿಸಿದರು. 1934 ರಿಂದ 1948 ರ ವರೆಗೆ

ಕುಮಾರಪ್ಪನವರಿಗೆ ವಾರ್ಧಾದ ಸೇವಾಗ್ರಾಮ ಅವರ ಪಾಲಿನ ಪ್ರಯೋಗಶಾಲೆ ಮತ್ತು ಕರ್ಮಭೂಮಿಯಾಯಿತು. ಆಧುನಿಕ ಜಗತ್ತು ಅವಲಂಬಿಸಿದ್ದ ವಸ್ತುಗಳ ಬದಲಾಗಿ ಪರ್ಯಾಯ ವಸ್ತುಗಳ ಹುಡುಕಾಟದಲ್ಲಿ ತೊಡಗಿದರು. ಕೃಷಿಯಲ್ಲಿ ರಸಾಯನಿಕ ಗೊಬ್ಬರಗಳ ಬದಲಾಗಿ ಹಸಿರಲೆ ಗೊಬ್ಬರವನ್ನು ರೈತರಿಗೆ ಪರಿಚಯಿಸಿದರು. ಸೀಮೆಎಣ್ಣೆ ಬದಲಾಗಿ, ನೈಸರ್ಗಿಕವಾಗಿ ಹೊಂಗೆ, ಬೇವು ಬೀಜಗಳಿಂದ ತಯಾರಿಸಿದ ತೈಲಗಳನ್ನು ದೀಪಗಳಿಗೆ ಬಳಸಲು ಉತ್ತೇಜನ ನೀಡಿದರು. ಟ್ರಾಕ್ಟರ್ ಬದಲಾಗಿ ರೈತರಿಗೆ ಅನೇಕ ಸುಧಾರಿತ ನೇಗಿಲುಗಳನ್ನು ಅವಿಷ್ಕರಿಸಿ ಪರಿಚಯಿಸಿದರು. ಸಾಬೂನು ಉತ್ಪಾದನೆಗೆ ಪೆಟ್ರೋಲ್ ಅಧಾರಿತ ಕಚ್ಚಾ ವಸ್ತುಗಳನ್ನು ಬಳಸುವ ಬದಲು ಅರಣದಲ್ಲಿ ಉಚಿತವಾಗಿ ದೊರೆಯುವ ವನಸ್ಪತಿ ಬಳಸಲಾರಂಭಿಸಿದರು. ಉರವಲಿನಂತೆ ಬಳಕೆಯಾಗುತ್ತಿದ್ದ ಕಬ್ಬಿನ ಸಿಪ್ಪೆಯನ್ನು ಕಾಗದ ಉತ್ಪಾದನೆಗೆ ಬಳಸಿ ಇತರರಿಗೆ ಪ್ರೇರಣೆಯಾದರು. ಚರಕ ಮತ್ತು ಕೈಮಗ್ಗಗಳನ್ನು ಪರಿಷ್ಕರಿಸಿ, ಹತ್ತಿ ನೂಲು ಮತ್ತು ಬಟ್ಟೆಯ ಉತ್ಪಾದನೆ ಹೆಚ್ಚಾಗುವಂತೆ ನೋಡಿಕೊಂಡರು. ಇವೆಲ್ಲವೂ ಕುಮಾರಪ್ಪನವರು ಹೊಸದಾಗಿ ಕಂಡು ಹಿಡಿದ ತಂತ್ರಜ್ಞಾನಗಳಾಗಿರಲಿಲ್ಲ, ಬದಲಾಗಿ ನಾವು ಮರೆತು ಕೈ ಬಿಟ್ಟಿದ್ದ ನಮ್ಮವೇ ಆದ ದೇಶಿ ತಂತ್ರಜ್ಞಾನಗಳಾಗಿದ್ದವು. ಪ್ರಕೃತಿಯನ್ನು ಯಾವ ಕಾರಣಕ್ಕೂ ಶೋಷಿಸಿದೆ ಅದರ ಕೊಡುಗೆಗಳನ್ನು ಬಳಸಿಕೊಳ್ಳಬೇಕೆಂಬುದು ಕುಮಾರಪ್ಪನವರ ಅಚಲ ನಿಲುವಾಗಿತ್ತು. ಅಣೆಕಟ್ಟುಗಳ ಬದಲಾಗಿ ಸಣ್ಣ ಸಣ್ಣ ಒಡ್ಡುಗಳನ್ನು ಕಟ್ಟಲು ರೈತರಿಗೆ ಪ್ರೋತ್ಸಾಹಿಸಿದರು. ಅವರ ಇಂತಹ ಪ್ರಯೋಗ ಮತ್ತು ಚಿಂತನೆಗಳಿಂದಾಗಿ "Economy Of Permanence, A Quest For A Social Order Based On Non- Violence" ಶಾಶ್ವತ ಅರ್ಥಶಾಸ್ತ್ರ ಮತ್ತು ಅಹಿಂಸೆಯನ್ನು ಅಧರಿಸಿದ ಸಮಾಜ ವ್ಯವಸ್ಥೆಯ ಅನ್ವೇಷಣೆ.) ಎಂಬ ಕೃತಿ ರಚನೆ ಅವರಿಂದ ಸಾಧ್ಯವಾಯಿತು.

ಕುಮಾರಪ್ಪನವರಿಗೆ ಇದ್ದ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯಿಂದಾಗಿ, ಅವರನ್ನು ಅಖಿಲ ಭಾರತ ಸಣ್ಣ ಕೈಗಾರಿಕೆಗಳ ಒಕ್ಕೂಟದ ಕಾರ್ಯದರ್ಶಿ ಸ್ಥಾನ ಅವರನ್ನು ಅರಸಿಕೊಂಡು ಬಂದಿತು. ಗಾಂಧಿ ಮತ್ತು ಅವರ ಅನುಯಾಯಿಗಳು, ಇಡೀ ದೇಶಕ್ಕೆ ಸ್ವರಾಜ್ಯ ಮತ್ತು ಸ್ವಾವಲಂಬಿತನದ ಚಳುವಳಿಯನ್ನು ಹರಡುವ ಉದ್ದೇಶದಿಂದ, ಸೇವಾಗ್ರಾಮವನ್ನು ಕೇಂದ್ರವಾಗಿಟ್ಟು ಆರಂಭವಾದ ಈ ಒಕ್ಕೂಟದ ಕಾರ್ಯದರ್ಶಿಯಾಗಿಯೂ ಸಹ ಕುಮಾರಪ್ಪ ಕಾರ್ಯನಿರ್ವಹಿಸುತ್ತಾ, ಗಾಂಧಿ ಚಿಂತನೆಗಳ ವಾರಸುದಾರರಂತೆ ಸೇವಾಗ್ರಾಮದಲ್ಲಿ ಬದುಕತೊಡಗಿದರು. ಆದರೆ, 1945ರಲ್ಲಿ ಸ್ವಾತಂತ್ರ್ಯದ ದಿನಗಳು ಹತ್ತಿರವಾಗುತ್ತಿದ್ದಂತೆ, ಗಾಂಧೀಜಿ ಮತ್ತು ಕುಮಾರಪ್ಪನವರಿಗೆ ಇದ್ದ ಕನಸುಗಳು ಛಿದ್ರವಾಗತೊಡಗಿದವು. ಬ್ರಿಟೀಷ್ ಆಳ್ವಿಕೆಯಲ್ಲಿ ನೆಹರೂ ನೇತೃತ್ವದ ಉಸ್ತುವಾರಿ ಸರ್ಕಾರಕ್ಕೆ ಗಾಂಧಿಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆಗಳು, ವೃದ್ಧನೊಬ್ಬನ ಹಪಾಹಪಿತನದಂತೆ ಕಂಡು ಬಂದವು. ನೆಹರೂ ಗುಡಿಕೈಗಾರಿಕೆಗಳ ಯೋಜನೆಗಳನ್ನು ನೇರವಾಗಿ ತಿರಸ್ಕರಿಸಿದರು. ಈ ಕುರಿತು 1945 ರ ಅಕ್ಟೋಬರ್ 5 ಮತ್ತು 9 ನೇ ದಿನಾಂಕಗಳ ನಡುವೆ ಗಾಂಧಿ ಮತ್ತು ನೆಹರು ನಡುವೆ ತೀರಾ ಖಾರವಾದ ಪ್ರತಿಕ್ರಿಯೆಗಳನ್ನು ಒಳಗೊಂಡ ಪತ್ರಗಳ ಸಮರವೂ ನಡೆಯಿತು. 1947 ರಲ್ಲಿ ಸ್ವಾತಂತ್ರ್ಯ ಹತ್ತಿರವಾಗುತ್ತಿದ್ದಂತೆ, ಭಾರತ ವಿಭಜನೆ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಉಂಟಾದ ಪರಿಣಾಮಗಳಿಂದ ಗಾಂಧೀಜಿಯವರು ನೆಹರೂ ಮತ್ತು ಪಟೇಲರಿಂದ ಮೂಲೆಗೆ ಒತ್ತರಿಸಲ್ಪಟ್ಟು ಅಕ್ಷರಶಃ ಏಕಾಂಗಿಯಾದರು.

ಈ ಎಲ್ಲಾ ಬೆಳವಣಿಗೆಗಳಿಂದ ವಿಚಲಿತರಾಗಿ ನೊಂದುಕೊಂಡ ಕುಮಾರಪ್ಪನವರು ಗಾಂಧೀಜಿ ಹತ್ಯೆಯ ನಂತರ, ಪಂಚವಾರ್ಷಿಕ ಯೋಜನೆಗಳಿಗೆ ಸಲಹೆಗಾರರಾಗಿ ಇರುವಂತೆ ನೆಹರೂ ನೀಡಿದ ಆಹ್ವಾನವನ್ನು ತಿರಸ್ಕರಿಸಿದರು. 1948ರಲ್ಲಿ ಸೇವಾಗ್ರಾಮದಿಂದ ತಮಿಳುನಾಡಿಗೆ ಬಂದ ಅವರು, ಮಧುರೈ ಸಮೀಪದ ಕಳ್ಳುಪಟ್ಟಿ ಎಂಬ ಗ್ರಾಮದಲ್ಲಿ

ಅರವತ್ತು ಎಕರೆ ಭೂಮಿ ಖರೀದಿಸಿ, ಗಾಂಧಿ ನಿಕೇತನ ಎಂಬ ಆಶ್ರಮ ಸ್ಥಾಪಿಸಿ, ತಾವು ಹಿಂದೆ ಸೇವಾಗ್ರಾಮದಲ್ಲಿ ಆರಂಭಿಸಿದ್ದ ಎಲ್ಲಾ ಯೋಜನೆಗಳನ್ನು ಮುಂದುವರಿಸಿದರು. ಗಾಂಧಿ ನಿಕೇತನ ಆಶ್ರಮದ ಚಟುವಟಿಕೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಸದ್ದುಮಾಡಿವೆ.

"ಅಮೇರಿಕಾದ ಗಾಂಧಿ" ಎಂದು ಕರೆಸಿಕೊಳ್ಳುತ್ತಿದ್ದ ಮಾರ್ಟಿನ್ ಲೂಥರ್ ಕಿಂಗ್ ಎರಡು ಬಾರಿ ಬೇಟಿ ನೀಡಿದ್ದರು. ಗಾಂಧಿ ಚಿಂತನೆಗಳ ಮತ್ತೊಬ್ಬ ಪ್ರತಿಪಾದಕ ಹಾಗೂ ಜಗತ್ತಿನ ಶ್ರೇಷ್ಠ ಅರ್ಥಶಾಸ್ತ್ರಜ್ಞತಲ್ಲಿ ಒಬ್ಬರಾದ ಶೂಮಾಕರ್ ಕೂಡ ಇಲ್ಲಿಗೆ ಬೇಟಿ ನೀಡಿದ್ದರು. ಹೀಗೆ ಸತತ ಹನ್ನೆರೆಡು ವರ್ಷಗಳ ಕಾಲ ಆಶ್ರಮವನ್ನು ಮುನ್ನೆಡೆಸಿದ ಕುಮಾರಪ್ಪನವರು ಗಾಂಧೀಜಿ ಇನ್ನಿಲ್ಲವಾದ ದಿನ ಅಂದರೆ, 1960ರ ಜನವರಿ 30 ರಂದು ನಿಧನ ಹೊಂದಿದರು. ಅವರನ್ನು ಗಾಂಧಿ ನಿಕೇತನದಲ್ಲಿ ಮಣ್ಣು ಮಾಡಿ, ಅವರ ಸಮಾಧಿ ನಿರ್ಮಿಸಲಾಗಿದೆ. ಪ್ರತಿ ದಿನ ಅವರ ಸಮಾಧಿಗೆ ನಮನ ಸಲ್ಲಿಸುವುದರ ಮೂಲಕ ನಿಕೇತನದ ಚಟುವಟಿಕೆ ಆರಂಭಗೊಳ್ಳುತ್ತವೆ. (ವಾರ್ಧಾದ ಸೇವಾಗ್ರಾಮದಲ್ಲೂ ಕೂಡ ಇದೇ ಆಚರಣೆ ಮುಂದುವರಿದಿದೆ) ಇದೀಗ ಗಾಂಧೀಜಿ ತತ್ವಗಳ ಅಡಿಯಲ್ಲಿ ಅವರ ಅನುಯಾಯಿಗಳು ಆಶ್ರಮವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ, ಕುಮಾರಪ್ಪನವರ ನೆನಪಿಗಾಗಿ ವಿದ್ಯಾ ಸಂಸ್ಥೆಗಳನ್ನು ಆರಂಭಿಸಿಲಾಗಿದ್ದು; ಗ್ರಾಮೀಣ ಕುಲ ಕಸುಬು ಮತ್ತು ಗೃಹ ಕೈಗಾರಿಕೆ ಕುರಿತಂತೆ ಡಿಪ್ಲಮೊ ಕೋರ್ಸುಗಳು ಆಶ್ರಮದಲ್ಲಿ ನಡೆಯುತ್ತಿವೆ, ಮಧುರೈ ನ ಕಾಮರಾಜ್ ವಿಶ್ವವಿದ್ಯಾನಿಲಯದಿಂದ ಗಾಂಧಿನಿಕೇತನ ಆಶ್ರಮದ ವಿದ್ಯಾ ಸಂಸ್ಥೆ ಮಾನ್ಯತೆ ಪಡೆದಿದೆ.

ಈ ಸಂಸ್ಥೆಯಿಂದ ಪ್ರೇರಣೆಗೊಂಡು, ಕರುಣಾಕರನ್ ಎಂಬ ಇಂಜಿನಿಯರ್ ವಿದ್ಯಾರ್ಥಿ 1980 ದಶಕದಲ್ಲಿ ಅದೇ ತಮಿಳುನಾಡಿನ ದಿಂಡಿಗಲ್ ಜಿಲ್ಲಾ ಕೇಂದ್ರದಿಂದ ಕೇವಲ ಆರು ಕಿಲೋಮೀಟರ್ ದೂರದಲ್ಲಿ ಸೇಲಂ–ಮಧುರೈ ಹೆದ್ದಾರಿಯಲ್ಲಿ ಆರಂಭಿಸಿರುವ ಗಾಂಧಿ ಗ್ರಾಮ ಎಂಬ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ, ಇಲ್ಲಿ ತಯಾರಾಗುವ ಗೃಹ ಬಳಕೆಯ ಹಾಗೂ ನೈಸರ್ಗಿಕ ವಸ್ತುಗಳಿಂದ ತಯಾರಿಸಲಾದ ವಸ್ತುಗಳು ಇಡೀ ತಮಿಳುನಾಡಿನಲ್ಲಿ ಭಾರಿ ಜನಪ್ರಿಯತೆ ಪಡೆದುಕೊಂಡಿವೆ.

ಆಧುನಿಕತೆಯ ಈ ಇಪ್ಪತ್ತೊಂದನೆಯ ಶತಮಾನದಲ್ಲಿ ಅನುಭೋಗ ಮತ್ತು ಲೋಲುಪತೆಯ ಬೆನ್ನಟ್ಟಿ ಹೊರಟಿರುವ ಭಾರತದ ಹೊಸ ತಲೆಮಾರಿಗೆ ಕುಮಾರಪ್ಪ ಮತ್ತು ಗಾಂಧಿ ಚಿಂತನೆಗಳು ಈಗ ಅಪ್ರಸ್ತುತ ಎನಿಸಬಹುದು. ಆದರೆ, ಗಾಂಧೀಜಿ ಹೊತ್ತಿಸಿದ ಸ್ವಾವಲಂಬಿತನದ ಬದುಕಿನ ಮೂಲ ಮಂತ್ರದ ಆ ಬೆಳಕಿನ ದೀಪ ಈಗಲೂ ಹಲವು ರೂಪಗಳಲ್ಲಿ ಆರದೆ ಉರಿಯುತ್ತಿದೆ. ಗಾಂಧಿ ಮತ್ತು ಕುಮಾರಪ್ಪನವರ ಮುಂದುವರೆದ ವಾರಸುದಾರರಂತೆ ಕಾಣಬರುವ ಉತ್ತರಪ್ರದೇಶದ ವಾರಾಣಾಸಿಯ ಬನರಾಸ್ ವಿ.ವಿ.ಯ ಪ್ರೊ. ಸಹಸ್ರಬುಧೆ, "ಲೋಕ ವಿದ್ಯಾ" ಎಂಬ ಸಂಸ್ಥೆಯೊಂದನ್ನು ಆರಂಭಿಸಿ, ಜನಸಮಾನ್ಯರಿಗೆ ಪರಿಷ್ಕರಿಸಿದ ಹಾಗೂ ಅಧುನಿಕ ಬದುಕಿಗೆ ಹೊಂದಿಕೊಳ್ಳಬಹುದಾದ ದೇಶಿ ತಂತ್ರಜ್ಞಾನಗಳನ್ನು ತಲುಪಿಸುತ್ತಿದ್ದಾರೆ...

(ಸೌಜನ್ಯ : ಭೂಮಿಗೀತ ಪತ್ರಿಕೆ) ■

"ನಿಜವಾದ ಐಶ್ವರ್ಯವೆಂದರೆ ಆರೋಗ್ಯ. ಅದು ಒಂದು ತುಂಡು ಬೆಳ್ಳಿಯಲ್ಲೋ ಬಂಗಾರದಲ್ಲೋ ಇಲ್ಲ."

~ ಮಹಾತ್ಮ ಗಾಂಧಿ




ಚಿತ್ರ : ಬಿ.ಜಿ. ಗುಜ್ಜಾರಪ್ಪ



Scanning is spinning
ಮಾಹಿತಿ ಲೋಕದ ಹೊಸ ನುಡಿಗಟ್ಟು

"Scanning is the new spinning"
"ಸ್ಕ್ಯಾನಿಂಗ್ ಅಂದ್ರೆ ಹೊಸ ನೂಲುವುದು" ಇದು ಈಗ ಮಾಹಿತಿ ಲೋಕದ ಹೊಸ ನುಡಿಗಟ್ಟು . ಮಹಾತ್ಮ ಗಾಂಧೀಜಿಯವರಿಂದ ತಮ್ಮ ಹೋರಾಟದ ಸ್ಫೂರ್ತಿ ಪಡೆದಿರುವ ಅಮೇರಿಕಾದ ತಂತ್ರಜ್ಞ ಕಾರ್ಲ್ ಮಲ್ ಮಡ್ ಅವರು , ಗಾಂಧೀಜಿಯವರು ಚರಕದಲ್ಲಿ ಹತ್ತಿ ನೂಲುವ ಮೂಲಕ ಬ್ರಿಟಿಷ್ ಸಾಮ್ರಾಜ್ಯವನ್ನು ಮಣಿಸಿ ಅಹಿಂಸಾ ಮಾರ್ಗದ ಮೂಲಕ ಸ್ವಾತಂತ್ರ್ಯ ಪಡೆದದ್ದನ್ನೇ ಆಧರಿಸಿ ಈ ನುಡಿಗಟ್ಟನ್ನು ರೂಪಿಸಿದ್ದಾರೆ.
public.resources.org ಎನ್ನುವ ಸ್ವಯಂ ಸೇವಾ ಸಂಸ್ಥೆಯ ಮೂಲಕ ಅವರು ಅಮೆರಿಕಾದಲ್ಲಿ ಮಾಹಿತಿ ಲೋಕದಲ್ಲಿ ಹೊಸ ಸಂಚಲನ ಮೂಡಿಸಿದ್ದಾರೆ. ದೇಶದ ಜನರೆಲ್ಲರೂ ಸೇರಿ ಸರ್ಕಾರವನ್ನು ರಚಿಸಿರುತ್ತಾರೆ. ಜನರಿಂದ ರಚನೆಯಾದ ಸರ್ಕಾರ ತನ್ನ ಮಾಹಿತಿಯನ್ನು ಜನರಿಗೆ ಉಚಿತವಾಗಿ ಮುಕ್ತ ರೂಪದಲ್ಲಿ ನೀಡಬೇಕು.



ಅದಕ್ಕೆ ಯಾವುದೇ ರೀತಿಯ ಶುಲ್ಕ ವಿಧಿಸ ಕೂಡದು ಎನ್ನುವುದು ಅವರ ವಾದ . ಇದನ್ನು ಆಧರಿಸಿ ಅಮೆರಿಕಾ ಸರ್ಕಾರದ ವಿರುದ್ಧ ಹೋರಾಡಿ ಅವರು ಗೆಲುವನ್ನು ಸಾಧಿಸಿದ್ದಾರೆ.

ಕಾರ್ಲ್ ಮಲ್ ಮಡ್ ಅವರು ಸರ್ಕಾರದ ಮಾಹಿತಿಯನ್ನು ಮುಕ್ತ ವೇದಿಕೆಯಲ್ಲಿ ಉಚಿತವಾಗಿ ಹಂಚಿ ಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಅವರ ವಿರುದ್ಧ ಅಮೆರಿಕಾದ ನ್ಯಾಯಾಲದಲ್ಲಿ ದಾವೆ ಹೂಡುತ್ತದೆ. ಈ ಬಗ್ಗೆ ಜಾರ್ಜಿಯಾ ಪ್ರಾಂತ್ಯದ ನ್ಯಾಯಾಲಯವು ನೀಡಿರುವ ತೀರ್ಪಿನಲ್ಲಿ ಹೀಗೆ ಹೇಳಿದೆ.

" we conclude that the people are the ultimate authors of the annotation. As a work of the people the annotations are inherently public domain material and therefore uncopyrightable.Because we conclude that no copyright can be held in the annotations,we have no occasion to address the parties other arguments regarding originality and fair use "


ಭಾರತದಲ್ಲಿಯೂ ಕಾರ್ಲ್ ಮಲ್ ಮಡ್ ಅವರು ಸಾಮಾನ್ಯ ಜನರಿಗೆ ಮಾಹಿತಿಗಳನ್ನು ಮುಕ್ತವಾಗಿ ಹಂಚುವ ಆಂದೋಲನವನ್ನು ಆರಂಭಿಸಿದ್ದಾರೆ. ಇದರ ಅಂಗವಾಗಿ ಅವರು ' ಹಿಂದ್ ಸ್ವರಾಜ್ ' ಹೆಸರಿನಲ್ಲಿ ಭಾರತಕ್ಕೆ ಸಂಬಂದಿಸಿದ ಹಲವಾರು ವಿಷಯಗಳನ್ನು ಸಂಗ್ರಹಿಸಿ ಮುಕ್ತ ಜಾಲ ತಾಣದಲ್ಲಿ ಹಂಚುತ್ತಿದ್ದಾರೆ . ಈ ಜಾಲ ತಾಣದಲ್ಲಿ ವಿಶೇಷವಾಗಿ ಗಾಂಧೀಜಿಯವರಿಗೆ ಸಂಬಂದಿಸಿದ ನೂರಾರು ಕೃತಿಗಳನ್ನು ಸ್ಕ್ಯಾನ್ ಮಾಡಿ ಅದನ್ನು ಜಾಲತಾಣದಲ್ಲಿ ಉಚಿತವಾಗಿ ವಿತರಿಸುತ್ತಿದ್ದಾರೆ . ನೆಹರು , ಅಂಬೇಡ್ಕರ್ ಮತ್ತು ಭಾರತೀಯ ಕಲೆ ಮತ್ತು ಸಂಸ್ಕೃತಿಗೆ ಸಂಬಂದಿಸಿದ ನೂರಾರು ಕೃತಿಗಳು ಸಹ ಇಲ್ಲಿವೆ.

ಇದರ ಮುಂದುವರಿದ ಭಾಗವಾಗಿ ಭಾರತೀಯ ಸ್ಥಳೀಯ ಭಾಷೆಗಳಲ್ಲಿ ಇರುವ ಕೃತಿಗಳನ್ನು ಮುಕ್ತ ಜ್ಞಾನ ವೇದಿಕೆಯಲ್ಲಿ ಹಂಚಿ ಕೊಳ್ಳುವ ಆಸೆ ಇವರದ್ದು. ಕನ್ನಡಕ್ಕೆ ಸಂಬಂಧಿಸಿದಂತೆ ಓಂ ಶಿವಪ್ರಕಾಶ್ ಅವರು ಸಂಚಯ ಫೌಂಡೇಶನ್ ಮೂಲಕ ಕಾರ್ಲ್ ಮಲ್ ಮೂಡ್ ಅವರ ಕಾರ್ಯದ ಜೊತೆ ಕೈಗೂಡಿಸಿದ್ದಾರೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಎಲ್ಲ ಪ್ರಕಟಣೆಗಳನ್ನು ಡಿಜಿಟಲ್ ವೇದಿಕೆಗೆ ತಂದು ಉಚಿತವಾಗಿ ಹಂಚುತ್ತಿದ್ದಾರೆ . ಕಸ್ತೂರಿ ಮಾಸಿಕ ಪತ್ರಿಕೆಯ ನಲವತ್ತು ವರ್ಷಕ್ಕೂ ಹಿಂದಿನ ಆರಂಭದ ಸಂಚಿಕೆಯಿಂದ ಹಿಡಿದು ಇಲ್ಲಿನವರೆಗಿನ ಎಲ್ಲ ಸಂಚಿಕೆಗಳನ್ನು ಡಿಜಿಟಲೀಕರಣ ಮಾಡಿ ಮುಕ್ತ ವೇದಿಕೆಯಲ್ಲಿ ಇಟ್ಟಿದ್ದಾರೆ. ತಮ್ಮ ಕೃತಿಗಳನ್ನು ಮುಕ್ತ ವೇದಿಕೆಯಲ್ಲಿ ಹಂಚಿಕೊಳ್ಳಲು ಆಸಕ್ತಿ ಇರುವ ಎಲ್ಲರಿಗೂ ಸಂಚಯ ಫೌಂಡೇಶನ್ ತಾಂತ್ರಿಕ ನೆರವು ನೀಡುತ್ತದೆ .

ಈ ಮುಕ್ತ ಮಾಹಿತಿ ಹಂಚುವ ತಮ್ಮ ಅಭಿಯಾನದ ಬಗ್ಗೆ ವಿದ್ಯಾರ್ಥಿ ಸಮೂಹದ ಜೊತೆ ಸಂವಾದ ನಡೆಸಲು ಅವರು ಇತ್ತೀಚಿಗೆ ಗಾಂಧಿ ಭವನದ ಸಹಯೋಗದಲ್ಲಿ ಕಾರ್ಯಕ್ರಮ ರೂಪಿಸಿದ್ದರು. ಶೇಷಾದ್ರಿಪುರಂ ವಾಣಿಜ್ಯ ಮತ್ತು ಮ್ಯಾನೇಜ್ ಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.ಇಂಥ ಚಿಂತನೆ ನನ್ನಲ್ಲಿ ಮೂಡಲು ಮಹಾತ್ಮ ಗಾಂಧೀಜಿಯವರೇ ಕಾರಣ ಎಂದು ಕಾರ್ಲ್ ಮಲ್ ಮಡ್ ತಮ್ಮ ಮಾತು ಆರಂಭಿಸಿದರು. ದಕ್ಷಿಣ ಆಫ್ರಿಕಾದಲ್ಲಿ ಆರಂಭವಾದ ಗಾಂಧೀಜಿಯವರ ಹೋರಾಟ ಯಶಸ್ವಿಯಾಗಿ ನಂತರ ಅವರು ಭಾರತಕ್ಕೆ ಆಗಮಿಸಿ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸಿದ ಬಗೆಯನ್ನು ಅವರು ಅಭಿಮಾನದಿಂದ ಸ್ಮರಿಸಿ ಕೊಂಡರು. ಅವರ ಹೋರಾಟದ ಚೈತನ್ಯವೇ ಮುಕ್ತ ಮಾಹಿತಿ ವೇದಿಕೆಗೆ ಸ್ಫೂರ್ತಿ ಎಂದರು .

ಕಾರ್ಲ್ ಮಲ್ ಮಡ್ ಜೊತೆ ಈ ಆಂದೋಲನಕ್ಕೆ ಭಾರತದಲ್ಲಿ ಸಹಕಾರ ನೀಡುತ್ತಿರುವ ಲಾರೆನ್ಸ್ ಲಿಯಾಂಗೋ ಅವರು ಹಕ್ಕು ಸ್ವಾಮ್ಯ (ಕಾಪಿ ರೈಟ್) ವಿಷಯಕ್ಕೆ ಗಾಂಧೀಜಿಯವರೇ ಮೂಲ ಸ್ಫೂರ್ತಿ . 1910 ರಷ್ಟು ಹಿಂದೆಯೇ ತಾವು ರಚಿಸಿದ ಹಿಂದ್ ಸ್ವರಾಜ್ ಕೃತಿಯ ಹಕ್ಕು ಸ್ವಾಮ್ಯವನ್ನು ಯಾರಿಗೂ ನೀಡದೆ ಮುಕ್ತವಾಗಿ ಇಟ್ಟ ಕುತೂಹಲದ ಮಾಹಿತಿಯನ್ನು ಅವರು ಮಿಕ್ಕಿ ಮೌಸ್ ಕೃತಿಯ ಉದಾಹರಣೆಯೊಂದಿಗೆ ಹಂಚಿ ಕೊಂಡರು . ಗಾಂಧೀಜಿಯವರು ತಮ್ಮ ಕೃತಿಗಳ ಹಕ್ಕು ಸ್ವಾಮ್ಯದ ಬಗ್ಗೆ ಯಾವತ್ತೂ ಆಸಕ್ತಿ ಹೊಂದಿರಲಿಲ್ಲ. ಜ್ಞಾನ ಮತ್ತು ಚಿಂತನೆಗಳು ಹೆಚ್ಚು ಹೆಚ್ಚು ಜನರಿಗೆ ತಲುಪಿದಾಗ ಮಾತ್ರ ಅದರ ಉಪಯೋಗ ಸಮಾಜಕ್ಕೆ ತಲುಪುತ್ತದೆ ಎನ್ನುವುದು ಅವರ ನಿಲುವಾಗಿತ್ತು. ಅವರ ಮಾರ್ಗದರ್ಶನದಲ್ಲಿಯೇ ನಮ್ಮ ಮುಕ್ತ ಮಾಹಿತಿ ಅಭಿಯಾನ ಮುಂದುವರಿಯುತ್ತದೆ ಎಂದು ಲಿಯಾಂಗೋ ಅಭಿಪ್ರಾಯ ಪಟ್ಟರು.

ಈ ವಿದ್ಯಾರ್ಥಿ ಸಂವಾದದಲ್ಲಿ ವಿದ್ಯಾರ್ಥಿಗಳು ಕೇಳಿದ ಕುತೂಹಲದ ಪ್ರಶ್ನೆಗಳ ಬಗ್ಗೆ ಕಾರ್ಲ್ ಮಲ್ ಮಡ್ ಮತ್ತು ಲಿಯಂಗೊ ಬಹಳ ಸಂತಸ ವ್ಯಕ್ತ ಪಡಿಸಿ ಸೂಕ್ತ ಉತ್ತರ ನೀಡಿದರು. ಈ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ವೂಡೇ ಪಿ ಕೃಷ್ಣ ವಹಿಸಿದ್ದರು. ಉಪಾಧ್ಯಕ್ಷರಾದ ಎನ್ ಆರ್ ವಿಶುಕುಮಾರ್ ಮುಖ್ಯ ಅತಿಥಿಗಳಾಗಿದ್ದರು. ಶೇಷಾದ್ರಿ ಪುರಂ ಕಾಲೇಜಿನ ಪ್ರಿನ್ಸಿಪಾಲ್ ವಿದ್ಯಾ ಶಿವಣ್ಣವರ್ ಅವರು ಸಂವಾದ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಎನ್ ಎಸ್ ಎಸ್ ಸಂಯೋಜಕರಾದ ಲಕ್ಷ್ಮಿ ನಾರಾಯಣ್ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಸಂವಾದ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು. ■



ಕ್ಷಮೆಯೆಂಬ ಶಕ್ತಿ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಜಲಿಯನ್ ವಾಲಾ ಭಾಗ್ ಹತ್ಯಾಕಾಂಡವೊಂದು ಕರಾಳ ಅಧ್ಯಾಯ. ಸುತ್ತಲೂ ಗೋಡೆ ಮತ್ತು ಕಟ್ಟಡಗಳಿಂದ ಸುತ್ತುವರೆದ ಆ ಉದ್ಯಾನವನದಲ್ಲಿ ಸಭೆ ನಡೆಸಲೆಂದು ಸೇರಿದ್ದ ಸುಮಾರು ಹತ್ತುಸಾವಿರ ಜನರ ಮೇಲೆ ಇದ್ದಕ್ಕಿದ್ದಂತೆ ಹದಿನಾರು ಸುತ್ತು ಗುಂಡುಗಳ ಸುರಿಮಳೆಯನ್ನು ಸುರಿಸಲಾಯಿತು. ಸಾವಿರಾರು ಮಂದಿ ಪ್ರಾಣ ಕಳೆದುಕೊಂಡರು, ಅನೇಕರು ಗಾಯಗೊಂಡರು. ಇವೆಲ್ಲಕ್ಕೂ ಕಾರಣನಾದವನು ಜನರಲ್ ಡಯರ್ ಎಂಬ ಬ್ರಿಟಿಷ್ ಸೇನಾಧಿಕಾರಿ. ಇದೇ ಘಟನೆ ಮುಂದೆ ಅಸಹಕಾರ ಚಳುವಳಿ ಮತ್ತು ಕಾನೂನು ಭಂಗ ಸತ್ಯಾಗ್ರಹಕ್ಕೆ ಕಾರಣವಾಯಿತು.

ಗಾಂಧೀಜಿಯವರನ್ನು ಬಹಳ ಕಾಡಿದ ಘಟನೆಯಿದು. ಅವರೊಳಗೆ ಡಯರ್‌ನ ಕ್ರೌರ್ಯ ಅದೆಂಥ ಪರಿಣಾಮ ಬೀರಿತ್ತೆಂದರೆ ಅವರು ಕ್ರೂರ ದೌರ್ಜನ್ಯವನ್ನು ವಿವರಿಸಲು 'ಡಯರಿಸಂ' ಎಂಬ ಪದವನ್ನು ಹುಟ್ಟುಹಾಕಿದರು.

ಕ್ಷಮೆಯ ಶಕ್ತಿಯ ಬಗ್ಗೆ ಗಾಂಧೀಜಿಯವರಿಗೆ ಇನ್ನಿಲ್ಲದ ನಂಬಿಕೆ. ಒಮ್ಮೆ ನೀವು ಡಯರ್ ನನ್ನು ಕ್ಷಮಿಸುತ್ತೀರಾ? ಎಂದು ಅವರನ್ನು ಕೇಳಿದಾಗ ಅವರೆಂದರು, "ಖಂಡಿತವಾಗಿ. ಅವನನ್ನು ನಾನು ಕ್ಷಮಿಸುತ್ತೇನೆ, ಆದರೆ ಅವನೊಳಗಿನ ಕ್ರೌರ್ಯವನ್ನಲ್ಲ. ಹಿಂಸ್ರ ಮನೋವೃತ್ತಿಯೂ ಒಂದು ಮಾನಸಿಕ ರೋಗ. ಡಯರ್ ಬಯಸುವುದಾದರೆ ಅವನನ್ನು ಮನುಷ್ಯನಾಗಿಸಲು ನಾನು ಸಹಾಯ ಮಾಡಬಲ್ಲೆ. ಆದರೆ ವ್ಯಕ್ತಿಯನ್ನು ಕ್ಷಮಿಸಿದ ಮಾತ್ರಕ್ಕೆ ಅವರ ಕ್ರೌರ್ಯವನ್ನು ಮರೆತೆವು ಎಂದರ್ಥವಲ್ಲ.ಅದರ ಪರಿಣಾಮಗಳು ನಮ್ಮ ಮುಂದಿನ ಕಾರ್ಯಗಳಿಗೆ ಮಾರ್ಗದರ್ಶಿಯಾಗಿರಬೇಕು."

ಜನರಲ್ ಡಯರ್ ತಮ್ಮ ಕೊನೆಯ ದಿನಗಳಲ್ಲಿ ಪಾರ್ಶ್ವವಾಯುವಿಗೆ ತುತ್ತಾಗಿ ನರಳಿದರು. ಇದನ್ನು ಗಾಂಧೀಜಿಯವರಿಗೆ ಹೇಳುತ್ತಾ ಅವರ ಸ್ನೇಹಿತರೊಬ್ಬರು," ತನ್ನ ಕರ್ಮಕ್ಕೆ ಸರಿಯಾದುದನ್ನೇ ಅನುಭವಿಸುತ್ತಿದ್ದಾರೆ" ಎಂದರು. ಆಗ ಗಾಂಧೀಜಿಯವರು ಅವರ ಮಾತುಗಳನ್ನು ಖಂಡಿಸುತ್ತಾ, " ಹಾಗೆನ್ನದಿರಿ, ನನಗೂ ಉದರಶೂಲೆ, ಅಪೆಂಡಿಸೈಟಿಸ್ ಮೊದಲಾದ ಖಾಯಿಲೆಗಳು ಬಾಧಿಸಿವೆ. ಆಗ ಬ್ರಿಟೀಷರು ತಮಗೆ ನೀಡಿದ ಅಸಹಕಾರಕ್ಕೆ ಸಂದ ಫಲ ಎನ್ನಬಹುದಲ್ಲವೆ? ಗೀತೆಯ ಕರ್ಮ ಸಿದ್ಧಾಂತದ ತಪ್ಪು ಅರ್ಥೈಸುವಿಕೆಯಿದು" ಎಂದು ತಿದ್ದಿದರು.

ಕ್ಷಮೆಯೆಂದರೆ ಎದುರಿಗಿರುವವನ ಕ್ರೌರ್ಯವನ್ನು ಗೆಲ್ಲುವ ಸಾತ್ವಿಕ ಶಕ್ತಿ ಎಂಬುದನ್ನು ಗಾಂಧೀಜಿಯವರು ಬದುಕಿನುದ್ದಕ್ಕೂ ಪ್ರತಿಪಾದಿಸಿದರು.

ಸಂಗ್ರಹ : ಸುಧಾ ಅಡುಕುಳ




"ಗಾಂಧೀ ವಿಚಾರ ಸಂಸ್ಕಾರ ಪರೀಕ್ಷೆ"

ಇಂದಿನ ಆಧುನಿಕ ಜಗತ್ತಿನಲ್ಲಿ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ, ಯುವಜನರಲ್ಲಿ ಹಾಗೂ ಸಾರ್ವಜನಿಕರಲ್ಲಿ ಬಿತ್ತುವ ಉದ್ದೇಶದಿಂದ ಮಹಾರಾಷ್ಟ್ರದ ಜಲಗಾವ್ನ ಗಾಂಧಿ ರಿಸಚ್ ಫೌಂಡೇಶನ್, ಅವರು **"ಗಾಂಧೀ ವಿಚಾರ ಸಂಸ್ಕಾರ ಪರೀಕ್ಷೆ"** ಯನ್ನು ವಿಶ್ವದಾದ್ಯಂತ ನಡೆಸುತ್ತಿದ್ದಾರೆ, ಇದುವರೆವಿಗೂ ದೇಶ ವಿದೇಶಗಳಲ್ಲಿ ಸುಮಾರು 20 ಲಕ್ಷ ಜನ ಈ ಪರೀಕ್ಷೆಯಲ್ಲಿ ಪಾಲ್ಗೊಂಡಿರುವುದು ಹೆಮ್ಮೆಯ ಸಂಗತಿ, ಕರ್ನಾಟಕದಲ್ಲಿ ಹಿಂದಿನ 7 ವರ್ಷಗಳಲ್ಲಿ 80 ಸಾವಿರ ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಾರ್ವಜನಿಕರು ಪರೀಕ್ಷೆ ತೆಗೆದುಕೊಂಡಿರುವುದು ಹರ್ಷದಾಯಕ ಸಂಗತಿ. ಈ ಪರೀಕ್ಷೆ ತೆಗೆದುಕೊಳ್ಳಲು ಸಹಕರಿಸಿದ ರಾಷ್ಟ್ರೀಯ ಸೇವಾ ಯೋಜನೆ ಕರ್ನಾಟಕ ಸರ್ಕಾರ ಮತ್ತು ಕಾಲೇಜಿನ ಎನ್ ಎಸ್ ಎಸ್ ಘಟಕ ಮತ್ತು ಗಾಂಧಿ ಅಧ್ಯಯನ ಕೇಂದ್ರಗಳು ಹಾಗೂ ಅಧ್ಯಾಪಕ ವೃಂದದವರಿಗೂ ಮಹಾರಾಷ್ಟ್ರದ ಜಲಗಾವ್ನ ಗಾಂಧೀ ರಿಸರ್ಚ್ ಫೌಂಡೇಶನ್‌ರವರಿಗೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರು ವತಿಯಿಂದ ಅಭಿನಂದನೆಗಳನ್ನು ಸಲ್ಲಿಸಲಾಗುತ್ತಿದೆ.

ಈ ಬೃಹತ್ ಯೋಜನೆಗೆ ಎಲ್ಲ ರೀತಿಯ ಸಹಾಯ ಮಾರ್ಗದರ್ಶನ ನೀಡುತ್ತಿರುವ ಕಾಲೇಜಿನ ಪ್ರಾಂಶುಪಾಲರು ಮತ್ತು ಗಾಂಧಿ ಭವನದ ಸದಸ್ಯರು ಮತ್ತು ಅಧ್ಯಕ್ಷರು, ಕಾರ್ಯದರ್ಶಿಯವರಿಗೆ, ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆಯ ಪರಿವಾರದ ಪರವಾಗಿ ಅಭಿನಂದನೆಗಳು. 2022–23ನೇ ಸಾಲಿನಲ್ಲಿ ಕರ್ನಾಟಕದ ನಾಲ್ಕು ವಿಭಾಗದ ಜಿಲ್ಲೆ, ತಾಲ್ಲೂಕು ಮತ್ತು ಸಂಸ್ಥೆಗಳ ಮಟ್ಟದಲ್ಲಿ ಸುಮಾರು 7528 ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ತೆಗೆದುಕೂಂಡಿದ್ದು ಈ ಪರೀಕ್ಷೆಯನ್ನು ಪ್ರಾಥಮಿಕ ಶಾಲೆ ಹಂತದಿಂದ ಪದವಿಯ ಹಂತದವರೆಗೂ ಈ ಪರೀಕ್ಷೆಯನ್ನು ಮೂರು ಹಂತದಲ್ಲಿ ನಡೆಸಲ್ಲಾಗುತ್ತಿದ್ದು, ಈ ಪರೀಕ್ಷೆಯನ್ನು ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು ಮತ್ತು ಮರಾಠಿ ಭಾಷೆಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಗಾಂಧೀಜಿ ತತ್ವಾಧಾರಿತ ಇಂಥಹ ಪರೀಕ್ಷೆಗಳು ನಡೆಸಿದರಿಂದ ಬೆಳೆಯುವ ಮಕ್ಕಳಲ್ಲಿ ಮತ್ತು ಯುವಕರಲ್ಲಿ ಗಾಂಧಿ ವಿಚಾರಗಳನ್ನು ಬಿತ್ತಲು, ಮನಗಳಲ್ಲಿ, ಸತ್ಯ ಅಹಿಂಸೆ, ಸಮಾನತೆ, ಸರ್ವೋದಯದ ಭಾವನೆಗಳನ್ನು ಪೋಷಿಸಲು ಮತ್ತು ಉತ್ತೇಜಿಸಲು ಸಹಕಾರವಾಗಿದೆ.

ಡಾ.ಅಭಿದ ಬೇಗಂ



Mahatma Gandhi and his Foreign Associates

Gandhi & Charlie Chaplin

Those attracted by the influence of Gandhiji during his London visit and who transformed themselves to the path of non-violence, there are many. In a colony of poor people there, the people of Quaker sect were running a centre in the West End. Gandhiji was staying as a guest of Murial Lester, Chief of that centre, in 1931. Instead of staying in luxurious guest houses of British government, Gandhiji opted to stay with people like supporters of freedom struggle, close to the poor etc.

During such occasions several Englishmen became his friends. Murial Lester came to India several times and undertook several social services. Similarly, Agatha Harrison, Horace Alexander, Ronald Rynolds and several others were Mahatma Gandhi's friends. Because of Gandhi's strong wave, British government I was very angry with him. But he had won the hearts of many Britishers in their own land. When Gandhiji was in London, the film actor Charlie Chaplin heard about this half naked wonderful man was astonished.




He was curious as to why Gandhiji was against mechanised civilization. Chaplin was worried about inhuman behaviour, neglect about poor people and mentality of extracting work from them like machines. He came straight to Mahatma Gandhi and discussed. His principles, logic, love and compassions were Mahatma Gandhi and his Foreign Associates / 123 unparalleled.

Later, the film “Modern Times' a comedy film produced by Chaplin, successfully exhibited how the modern civilization has made man into machines. That film was popular even in the nineties. It was popular as a film propagating Gandhi's path. The meeting of Gandhi and Chaplin was a great momentum. This left a permanent impression on the mind of Charlie Chaplin .

Romen Rola

Another saint who was a close associate of Gandhiji was Nobel Prize winning French litterateur Romen Rola. The path of satyagraha led by Gandhiji had attracted her very much. From her spiritual achievement, she had the inspiration of great souls of India Ramakrishna, Vivekananda and Ravindranath Tagore. She wrote the life history of Mahatma Gandhi Mahatma Gandhi and his Foreign Associates /121 in the French language in 1924. People in Europe were longing for peace because of bloodshed and wars. Rola was a representative of such crores of people and struggled hard to make people realise the spiritual tradition of India. Her desire to visit India was never fulfilled. She became very close to Gurudev Thakur and Gandhiji by regularly corresponding with them. She would welcome C.F. Andrews, Meera Bahen, Dr. Kalidasanag and such other famous Gandhians and collect information about India. The letter correspondence she has done with Gandhiji has been published as a 1000-page big volume. While returning from London after the Round Table Conference in 1931, Gandhiji got down at the naturally beautiful villa of Rola. That was an unforgettable, momentous meeting. Thrilled by the meeting, Rola wrote in her diary about her honourable guest like this : "That rare smiling face. His bald head drenched from the raindrops. When he warmly gave a hug that wet my head and smoothly touched my cheek. I was so excited. It recollected the meeting of St. Francis and St. Dominic.



Meera Bahen for the first time heard Gandhiji's name from Rola. In 1924, when she met this rich English young lady in Switzerland, she asked: "Rola, have you heard the name of a person called Gandhi? He is a modern Jesus Christ". Madeleine Slade who was in search of a guru was immediately attracted towards Gandhi.

Meera Bahen

Mahatma Gandhi who was known as Bharata Bhagya Vidhata was a great personality who was in the minds of innumerable foreign peace loving intellectuals. The number of people from different corners of the world who sought his proximity was too much. All of them got inspiration from their own lives. For achieving the world peace, the contribution of these people is great. This peace loving group's moral support for the Indian freedom struggle is worth recollecting.



Ms. Madalene Slade in her autobiography entitled "The Spirits Pilgrimage" has narrated as above. In 1924, by knowing about Gandhiji through Raman Rola this British young lady who came to India was the daughter of Britains' senior naval officer Sir Edmond Slade. She completely adopted the Indian lifestyle, joined Sabarmati Ashram and was one among Gandhiji's close relatives. She rejected her: luxurious life, remained a spinster and became a social worker leading a simple village life. Gandhiji called this lady Meera Bahen. Gandhiji told her: "you are my daughter from today". Meera Bahen was celebrating that day as her second birth day. "My desire is fulfilled. Internal 118 / Mahatma Gandhi and his Foreign Associates pressure brought me here. Now I have come towards the bright sunshine and entered the difficult path of finding the truth. I thought that though this is a tough climbing, it is a very happy and beautiful path" she said this about herself. Throughout her ninety years, she served

India and the world and died in Vienna in 1982. She is remembered as the diamond — of Gandhi family (Her detailed history is in the book "Nalku Gandhiwadigalu").

Deenabandhu C.F. Andrews



Gandhiji's very close friend C.F. Andrews is well known to Indians. This English saint who was influenced by Gandhiji was a missionary who came to Delhi's St. Stephen College as a professor. During the time of satyagraha in South Africa, Gopalakrishna Gokhale sent him for compromise. Andrews who knew about Gandhiji very happily became a true volunteer to help get justice in the violence against colour. He became one among the Gandhi family as an elder brother. He was known as a crusader of non-violence. After joining Thakur's Shantiniketan, Andrews was a golden bridge between Gandhji and Gurudev Thakur. CF. Andrews who saw Jesus Christ in Bapu proposed the concept of satyagrahainachurchin South Africa. He explained very clearly as to how the path of satyagraha is equal to the path of love of Jesus. During that time, when Gandhiji came to the prayer meeting,

Mahatma Gandhi and his Foreign Associates /119 he was not allowed to the meeting as he was not a white. Andrews writing about this incident regretted himself because an obedient follower of Christ was rejected to attend prayer meeting. Charlie Andrews stood as a supporter to Gandhiji in his struggle in South Africa and helped compromise. Then for 37 years, he stood as a moral power in India's freedom struggle. He was a familiar person in Shantiniketan, Sabarmati and Sevagram ashrams. When he died in 1941, in Calcutta Bapu said, "I have not found a better Christian than Charlie Andrews" (His life history has been published)*

Albert West

A coworker of Gandhiji in South Africa was Albert West of England. This educated youth was introduced to Gandhiji in a vegetarian restaurant. An expert in journalism and printing, West jumped actively into the social service activities of Gandhiji. He cooperated by reserving his printing press for Gandhiji's paper 'Indian Opinion'. In 1904, when there was an epidemic of plague, and when Gandhiji started serving in the black Africans, West stood for the service without any fear. He was very much attracted by Gandhiji's principles of life. When in the Phoenix ashram, West took an important decision, became an ashramite and joined the group of workers. Till the end, he was in social service and a Gandhian.



Joseph Doke




Joseph Doke was another practitioner of non violence and Christian missionary who published the first life history of Mahatma Gandhi in 1912. Doke has considered Gandhiji as his greatest seer. He had observed Gandhiji's satyagraha in South Africa and his was of non-violence. Once in his struggle, when Gandhiji was seriously injured and fell unconscious on the road, Dock couple took Gandhiji to their house. Gandhiji became so much overwhelmed by the service he got from the Doke couple their relationship remained green till the end. The Christian devotional songs which Mr. Doke sang so melodiously were making Gandhiji still stronger and stronger in his path of non-violence and truthfulness. The book on life history of Gandhiji and his fundamental principles of satyagraha were appreciated by Maharshi Tolstoy. In an important letter written to Gandhiji, Tolstoy says, "This path of satyagraha is the hope for the mankind in the future . Humans will realise this one day in future!"


ಚಿ|ತ್ರಾ|ವ|ಳಿ

ಅರಸೀಕೆರೆಯ ಕಸ್ತೂರ್ ಬಾ ಗಾಂಧಿ ಸ್ಮಾರಕ ರಾಷ್ಟ್ರೀಯ ಟ್ರಸ್ಟ್ ನ ಆಶ್ರಮದಲ್ಲಿರುವ ಬಾಲಕಿಯರು ಮೂರು ದಿನಗಳ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ತಯಾರಿಸಿದ ಕಲಾ ಕೃತಿಗಳು. ಮಹಿಳಾ ಜನಪರ ಹೋರಾಟಗಾರ್ತಿ ವಾಣಿ ಪೆರಿಯೋಡಿ ಅವರು ಕಳೆದ ಮೂರ್ನಾಲ್ಕು ವರ್ಷಗಳಿಂದ ಈ ರೀತಿಯ "ಚಂದದ ಬದುಕು" ಶಿಬಿರಗಳನ್ನು ನಡೆಸಿ ಕೊಡುತ್ತಿದ್ದಾರೆ.













ಚಿ|ತ್ರಾ|ವ|ಳಿ




ಯಶೋದರಮ್ಮ ದಾಸಪ್ಪ ಅವರ ಜನ್ಮದಿನವನ್ನು ಮೇ 28 ರಂದು ಅರಸೀಕೆರೆ ಕಸ್ತೂರ್ ಬಾ ಆಶ್ರಮದಲ್ಲಿ ಆಚರಿಸಲಾಯಿತು

ಉತ್ತರ : ಪದಬಂಧ – 5

(ಈ ಸಂಚಿಕೆಗೆ ಪದಬಂಧ ಅಂಕಣ ಮುಕ್ತಾಯವಾಗುತ್ತದೆ)

1 ಕೆ	ಟ	ಲ್		2 ಜೀ	ವ	3 ನ	ಮೆ	ಹ್ರಾ
ಲಿ						ಸ		
4 ಮಾ	5 ನಿ	ನಿ		6 ಮಾಂ	7 ಸಾ	ಹಾ	ರ	
	ಯ				ಲಾ			8 ಮಿ
9 ಸ	ಮ	10 ರ	ಸ		11 ಗು	12 ಜ	ರಾ	ತ
ರ		ಜ				ವ		ವ್ಯ
ಳ		13 ನಿ	14 ವೈ		15 ಉ	ಳಿ	16 ತಾ	ಯ
17 ತೆ	ರೆ		ಶಾ		ತ್ರ		ಮ್ರ	
		18 ಶಾ	ಖ	ಹಾ	ರ			


ಅಹಿಂಸೆಗೆ ಎರಡು ನಂಬಿಕೆಗಳು ಬೇಕಾಗುತ್ತದೆ. ದೇವರು ಮೇಲೆ ನಂಬಿಕೆ ಇದ್ದಂತೆಯೇ ಮನುಷ್ಯನ ಮೇಲೆಯೂ ವಿಶ್ವಾಸ ಇರಬೇಕು.



ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001

Printed at : CreativeGeekZ, Yadhava College Road, Madhavanagara Bengaluru - 560001 Ph : +91 80 40927049 E-mail : mail@creativegeekz.com